ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

SHRIDEVI EDUCATION




ಮಾಸಪತ್ರಿಕೆ
ಸಂಪುಟ 3, ಸಂಚಿಕೆ 6, ಏಪ್ರಿಲ್ 2025

SHRIDEVI ANTARANGA
Monthly Magazine

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್


## ಪ್ರಧಾನಮಂತ್ರಿಗಳಿಂದ ಮೆಚ್ಚುಗೆ

### ‘ಆರೋಗ್ಯ ಮತ್ತು ಅಭಿವೃದ್ಧಿ ವಲಯಕ್ಕೊಂದು ಬೂಸ್ಟ್’ ಫೆಬ್ರವರಿ ಮಾಸದಲ್ಲಿ




ಶ್ರೀದೇವಿ ಅಂತರಂಗ ಮಾಸಪತ್ರಿಕೆ ಭಾರತ ಸರ್ಕಾರದ ಆಯವ್ಯಯವನ್ನು ವಿಶ್ಲೇಷಿಸಿತ್ತು. ಆ ವಿಶ್ಲೇಷಣೆಗೆ ಭಾರತದ ಪ್ರಧಾನಿ ಸನ್ಮಾನ್ಯ ಶ್ರೀನರೇಂದ್ರಮೋದಿ ಅವರು ಸಂಪಾದಕರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರಿಗೆ ಪತ್ರ ಬರೆದಿದ್ದಾರೆ. ಆ ಪತ್ರದಲ್ಲಿ ಪ್ರಧಾನಮಂತ್ರಿಗಳು ತಮ್ಮ ಸರ್ಕಾರದ ನೀತಿ, ನಿರೂಪಣೆಯ ಬಗ್ಗೆ ಹೇಳಿದ್ದಾರೆ.





प्रधान मंत्री
Prime Minister

New Delhi
चैत्र 18, शक संवत् 1947
08 April, 2025

Dr. M. R. Hulinaykar Ji.

I received your letter, and it is a pleasure to see your appreciative comments about the Union Budget. I am grateful to you for the warmth and positivity with which you have expressed your thoughts.

This budget is not just a statistical statement of economic numbers but also a powerful medium to empower the dreams, hopes and aspirations of 140 crore people. The spirit of this budget is people's welfare through public participation and the nation's growth through public welfare.

The government endeavours to make every citizen an active participant in the nation's development journey. With this thought in mind, this budget has been designed to provide an impetus to savings, investment, consumption and development.

It creates opportunities for youth, furthers women-led development, empowers farmers and has provided a big tax relief for the people. The tax exemption for the middle class in the budget will further enhance their standard of living.

In the budget, firm steps have been taken to encourage every sector - from gig workers to Indian products shining in the global market, from shipbuilding to the tourism sector, from cleantech to deep tech.

This budget is a definitive step in our journey towards *Viksit Bharat* by 2047. It is the cooperation and support of aware citizens like you that will make this journey a successful one.

Thanks again for your affection, trust and best wishes.

Yours,

(Narendra Modi)

Dr. M. R. Hulinaykar
‘Shivadeepthi’
3rd Cross, Someshwara Extention
Tumakuru
Karnataka- 572103

ಕನ್ನಡಾನುವಾದ ಪುಟ 3



ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

## ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರ ಸುಂಕ-ವರವೋ? ಶಾಪವೋ?




### ವಿಶ್ವದಲ್ಲಿ ವಾಣಿಜ್ಯ ಸಮರ ಪ್ರಾರಂಭವಾಗಲಿದೆಯೇ?

ಜಗತ್ತು ವಾಣಿಜ್ಯ ಸಮರದ ಹೊಸ್ತಿಲಿಗೆ ಬಂದು ನಿಂತಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಏಪ್ರಿಲ್ 2ರಂದು ತಮ್ಮ ದೇಶಕ್ಕೆ ಬೇರೆ ದೇಶಗಳಿಂದ ಆಮದಾಗುವ ಉತ್ಪನ್ನಗಳಿಗೆ ಸುಂಕ ಘೋಷಿಸಿದ ದಿನದಿಂದ ಒಂದರ ಬೆನ್ನಿಗೊಂದರಂತೆ ದಿಢೀರ್ ಹಾಗೂ ಅನಿರೀಕ್ಷಿತ ಬೆಳವಣಿಗೆಗಳು ಸಂಭವಿಸುತ್ತಿವೆ.

ತಮ್ಮ ದೇಶದಲ್ಲಿ ದೇಶೀಯ ಉತ್ಪಾದನೆ ಹೆಚ್ಚಿಸಬೇಕು; ಉದ್ಯೋಗಾವಕಾಶಗಳನ್ನು ಹೆಚ್ಚಿಸಬೇಕು;

▶▶ 2ನೇ ಪುಟಕ್ಕೆ...

# ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ ಕುರುಬ ಸಾಂಸ್ಕೃತಿಕ ಪರಿಷತ್ತಿನಿಂದ 31 ಕೃತಿಗಳ ಲೋಕಾರ್ಪಣೆ



ಕುರುಬರ ಸಾಂಸ್ಕೃತಿಕ ಪರಿಷತ್ತು ತುಮಕೂರಿನ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ವೈದ್ಯಕೀಯ ಕಾಲೇಜಿನಲ್ಲಿ ಜಂಟಿಯಾಗಿ ಏಪ್ರಿಲ್ 19 ರಂದು ಏರ್ಪಡಿಸಿದ್ದ 31 ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು.

■ ಕೆ.ಎಸ್. ರಾಜಮನ್ನಾರ್
ಹಿರಿಯ ಪತ್ರಕರ್ತರು

ಶಿಕ್ಷಣ, ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯಿಂದ ಸಮಾನತೆ ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ. ಕುರುಬರ ಸಾಂಸ್ಕೃತಿಕ ಪರಿಷತ್ತು ತುಮಕೂರಿನ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ವೈದ್ಯಕೀಯ ಕಾಲೇಜಿನಲ್ಲಿ ಜಂಟಿಯಾಗಿ ಏಪ್ರಿಲ್ 19 ರಂದು ಏರ್ಪಡಿಸಿದ್ದ 31 ಕೃತಿಗಳ ಲೋಕಾರ್ಪಣೆ ಮಾಡಿ ಮಾತನಾಡುತ್ತಿದ್ದರು.

“ಹಿಂದುಳಿದವರು, ದುರ್ಬಲ ಮತ್ತು ಶೋಷಿತ ಸಮುದಾಯಗಳು ಜಾತಿ ಸಮಾವೇಶ ಮಾಡಬಹುದು. ಆದರೆ ಮುಂದುವರಿದ ಜಾತಿಗಳು ಇಂತಹ ಜಾತಿ ಸಮಾವೇಶ ಮಾಡುವುದು ಅಪಾಯಕಾರಿ ಬೆಳವಣಿಗೆ” ಎಂದು ವ್ಯಾಖ್ಯಾನಿಸಿದರು.

“ಸಮಾಜದಲ್ಲಿ ಶಿಕ್ಷಣ ಎಷ್ಟು ಪ್ರಾಮುಖ್ಯ ಎಂಬುದಕ್ಕೆ ನಾನೇ ಪ್ರತ್ಯಕ್ಷ ಉದಾಹರಣೆ. ನಮ್ಮ ಕುಟುಂಬದಲ್ಲಿ ನಾನೇ ಮೊದಲ ವಿದ್ಯಾವಂತ. ಹೀಗಾಗಿ ನನಗೆ ಮಂತ್ರಿಯಾಗುವ, ಮುಖ್ಯಮಂತ್ರಿಯಾಗುವ ಅವಕಾಶ ಒದಗಿ ಬಂತು. ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಕಳೆದರೂ ಇನ್ನೂ ಜಾತಿಯತೆ, ಅಸ್ಪೃಶ್ಯತೆ, ಅಸಮಾನತೆ ಸಮಾಜದಲ್ಲಿ ತಾಂಡವಾಡುತ್ತಿದೆ. ಸಾಹಿತ್ಯ, ಸಂಸ್ಕೃತಿ, ಚಿಂತನ–ಮಂಥನ, ವಿಚಾರವಿನಿಮಯ ಕೇವಲ ಒಂದು ಜಾತಿ ಅಥವಾ ಸಮುದಾಯಕ್ಕೆ ಮೀಸಲಾಗದೆ ಎಲ್ಲ ಸಮುದಾಯದಲ್ಲೂ ನೀರಿನಂತೆ ಹರಿಯಬೇಕು. ಪ್ರತಿಭೆ ಯಾರೊಬ್ಬರ ಸ್ವತ್ತಲ್ಲ ಆದರೆ ನಮ್ಮ ಆಲೋಚನೆಗಳು ವೈಜ್ಞಾನಿಕ ಮತ್ತು ವೈಚಾರಿಕ ನಿಲುವು ಪ್ರತಿಪಾದಿಸಬೇಕು.

▶▶ 4ನೇ ಪುಟಕ್ಕೆ...

# ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರ ಸುಂಕ-ವರವೋ? ಶಾಪವೋ?



▶▶ ಮೊದಲನೇ ಪುಟದಿಂದ

ಡಾಲರನ್ನು ಮತ್ತಷ್ಟು ಬಲಪಡಿಸಬೇಕು; ರಫ್ತು–ಆಮದು ವಹಿವಾಟು ಮೌಲ್ಯದ ಅಂತರವನ್ನು ತಗ್ಗಿಸಬೇಕು ಇತ್ಯಾದಿ ಗುರಿಯೊಂದಿಗೆ ಡೊನಾಲ್ಡ್ ಟ್ರಂಪ್ ಅವರು ಆಮದು ಉತ್ಪನ್ನಗಳ ಮೇಲೆ ಸುಂಕ ಹೆಚ್ಚಿಸಿದ್ದಾರೆ. ಅಮೆರಿಕಕ್ಕೆ ಬರುವ ಎಲ್ಲಾ ಆಮದು ಪದಾರ್ಥಗಳಿಗೆ ಕನಿಷ್ಠ ಶೇಕಡಾ 10ರಷ್ಟು ಸುಂಕ ಅನ್ವಯಗೊಳಿಸಿ, ಇದನ್ನು ಗರಿಷ್ಠ 54ರವರೆಗೂ ನಿಗದಿಗೊಳಿಸಲಾಗುವುದು ಎಂದು ಟ್ರಂಪ್ ಪ್ರಕಟಿಸಿದರು. ತಾವು ಸುಂಕ ಘೋಷಿಸಿದ ದಿನವನ್ನು ಟ್ರಂಪ್ ಅವರು 'ಅಮೆರಿಕದ ವಿಮೋಚನಾ ದಿನ' (ಲಿಬರೇಷನ್ ಡೇ) ಎಂದೂ ಬಣ್ಣಿಸಿದರು.

ಚೀನಾ ಸೇರಿದಂತೆ ಸುಮಾರು 57 ದೇಶಗಳ ಆಮದು ಉತ್ಪನ್ನಗಳನ್ನು ಈ ಸುಂಕ ವ್ಯಾಪ್ತಿಗೆ ಒಳಪಡಿಸಲಾಗಿದೆ. ಆದರೆ, ಈ ಸುಂಕದ ಪ್ರಮಾಣವು ಎಲ್ಲಾ ದೇಶಗಳ ಉತ್ಪನ್ನಗಳಿಗೂ ಒಂದೇ ತೆರನಾಗಿಲ್ಲ. ಇಸ್ರೇಲ್‌ನಿಂದ ರಫ್ತಾಗಿ ಬರುವ ವಸ್ತುಗಳಿಗೆ ಶೇ. 17ರಷ್ಟು ಜಪಾನ್, ದಕ್ಷಿಣ ಕೊರಿಯಾ ಉತ್ಪನ್ನಗಳಿಗೆ ಶೇ. 26, ಕೆನಡಾಗೆ ಶೇ. 25, ಥಾಯ್ಲೆಂಡ್‌ಗೆ ಶೇ. 36, ವಿಯೆಟ್ನಾಂಗೆ ಶೇ. 46, ಕಾಂಬೋಡಿಯಾ ಶೇ. 49 ಹಾಗೂ ಬಾಂಗ್ಲಾಗೆ ಶೇ. 37ರಷ್ಟು ತೆರಿಗೆ ನಿಗದಿಗೊಳಿಸಲಾಗಿದೆ. ಭಾರತಕ್ಕೆ ಇದು ಶೇ. 26ರಷ್ಟಿದೆ.

ಅಮೆರಿಕದ ಈ ಸುಂಕ ಹೇರಿಕೆ ಧೋರಣೆಯಿಂದ ವ್ಯಾಪಾರೋದ್ಯಮದ ಜಗತ್ತು ಬೆದರಿದೆ. ಈ ಭೀತಿಯು ಏಪ್ರಿಲ್ 6 ಮತ್ತು 7ರಂದು ಜಗತ್ತಿನ ಎಲ್ಲಾ ಷೇರುಪೇಟೆಗಳು ಭಾರಿ ಪತನವನ್ನು ಕಂಡವು.

ಟ್ರಂಪ್ ಅವರು ಸುಂಕ ವಿಧಿಸುವಿಕೆ ಪ್ರಕಟಿಸಿದ ಅನಂತರ ಜಾಗತಿಕ ವಹಿವಾಟು ವಲಯದಲ್ಲಿ ಸಾಕಷ್ಟು ಬೆಳವಣಿಗೆಗಳಾಗಿವೆ. ಇನ್ನು, ಟ್ರಂಪ್ ಅವರ ನೀತಿ ಚೀನಾ ವಿಷಯದಲ್ಲಿ ಸಂಪೂರ್ಣ ಬೇರೆಯೇ ಆಗಿದೆ. ಬೈಡನ್ ಅವರ ಆಡಳಿತದಲ್ಲಿ ಚೀನಾದ ಮೇಲೆ ವಿಧಿಸುತ್ತಿದ್ದ ಸರಾಸರಿ ಆಮದು ಸುಂಕವನ್ನು ಶೇ. 20.8ನ್ನು ಮೊದಲಿಗೆ ಟ್ರಂಪ್ ಅವರು ಶೇ. 54ರಷ್ಟಕ್ಕೆ ಏರಿಸಿದ್ದರು. ಆಗ ಚೀನಾವು ತನ್ನಲ್ಲಿಗೆ ಬರುವ ಅಮೆರಿಕದ ಉತ್ಪನ್ನಗಳಿಗೆ ಶೇ. 34ರಷ್ಟು ತೆರಿಗೆ ಹೇರಿತು. ಇದಕ್ಕೆ ಪ್ರತಿಯಾಗಿ ಟ್ರಂಪ್ ಚೀನಾ ಮೇಲಿನ ಸುಂಕವನ್ನು ಶೇ 104ಕ್ಕೆ ಹೆಚ್ಚಿಸಿದರು. ಅಮೆರಿಕದ ಸುಂಕದ ಈ ಅಸ್ತ್ರಕ್ಕೆ ತಾನು ಸೊಪ್ಪು ಹಾಕುವುದಿಲ್ಲವೆಂದ ಚೀನಾ ಅಧ್ಯಕ್ಷರು ಆಗ ಅಮೆರಿಕದ ಉತ್ಪನ್ನಗಳಿಗೆ ಸುಂಕವನ್ನು ಶೇ 84ಕ್ಕೆ ಹೆಚ್ಚಿಸಿದರು. ಟ್ರಂಪ್ ಕೂಡ ತೊಡೆ ತಟ್ಟಿ, ಆಗ ಸರಾಸರಿ ಸುಂಕವನ್ನು ಶೇ. 134.75ಕ್ಕೆ ಏರಿಸಿದರು. ಇತ್ತೀಚಿನ ವರದಿಗಳ ಪ್ರಕಾರ ಈ ಸುಂಕವನ್ನು ಶೇ. 245ಕ್ಕೆ ಏರಿಸಲಾಗಿದೆ!

### ಭಾರತಕ್ಕೆ ಚೀನ ತೋರಿಸುತ್ತಿರುವ ಪ್ರೀತಿ

ಇನ್ನು, ಭಾರತಕ್ಕೆ ಸಂಬಂಧಿಸಿದಂತೆ ಏಪ್ರಿಲ್ 2ರ ಪ್ರಕಟಣೆಯಲ್ಲಿ ನಮ್ಮಿಂದ ಅಮೆರಿಕಾಕ್ಕೆ ರಫ್ತಾಗುತ್ತಿದ್ದ ಔಷಧ ಉತ್ಪನ್ನಗಳಿಗೆ ಸುಂಕದಿಂದ ವಿನಾಯಿತಿ ನೀಡಲಾಗಿತ್ತು. ನಂತರದ ಎರಡು–ಮೂರು ದಿನಗಳಲ್ಲೇ ಅವನ್ನೂ ಸುಂಕದ ತೆಕ್ಕೆಗೆ ತರಲಾಯಿತು. ಇದೇ ವೇಳೆ, ಕೆನಡಾ, ಸಿಂಗಪುರ, ಯು.ಕೆ, ಜರ್ಮನಿ, ಇಟಲಿ, ಸ್ವೀಡನ್ ಸೇರಿದಂತೆ ಯೂರೋಪಿನ ಹಲವು ದೇಶಗಳು ಅಮೆರಿಕದ ಈ ನೀತಿಯ ಬಗ್ಗೆ ತೀವ್ರ ಅಸಮಾಧಾನದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದವು. ಮುಂಬರುವ ದಿನಗಳಲ್ಲಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಹಾಗೂ ಅಮೆರಿಕಕ್ಕೆ ಹೊರತಾಗಿ ಪರ್ಯಾಯ ಮಾರುಕಟ್ಟೆಗಳನ್ನು ಶೋಧಿಸಿಕೊಳ್ಳುವ ಮಾತುಗಳನ್ನೂ ಈ ದೇಶಗಳು ಆಡಿವೆ. ಚೀನಾ ಒಂದು ಹೆಜ್ಜೆ ಮುಂದೆ ಹೋಗಿ, ನಾವಿಬ್ಬರೂ (ಚೀನಾ ಹಾಗೂ ಭಾರತ) ಒಟ್ಟುಗೂಡಿದರೆ ಅಮೆರಿಕವನ್ನು ಮಣಿಸಬಹುದು ಎಂದಿದೆಯಾದರೂ ಭಾರತ ಅದಕ್ಕೆ ಇನ್ನೂ ಯಾವ ಪ್ರತಿಕ್ರಿಯೆಯನ್ನೂ ತೋರುವ ಗೋಜಿಗೆ ಹೋಗಿಲ್ಲ.

ಈ ಮಧ್ಯೆ, ಟ್ರಂಪ್ ಅವರು ಏಪ್ರಿಲ್ 9ರಂದು ದಿಢೀರನೆ ತಾವು ವಿಧಿಸಿರುವ ಸುಂಕ ನೀತಿಯನ್ನು ಚೀನಾ ಹೊರತುಪಡಿಸಿ ಇತರೆ ದೇಶಗಳಿಗೆ 90 ದಿನಗಳ ಮಟ್ಟಿಗೆ ತಡೆ ಹಿಡಿದಿರುವುದಾಗಿ ಪ್ರಕಟಿಸಿದ್ದಾರೆ. ಈ ಮೂರು ತಿಂಗಳ ಅವಧಿಯಲ್ಲಿ ಎಲ್ಲ ದೇಶಗಳೂ ತನ್ನೊಂದಿಗೆ ಸೂಕ್ತ ಒಪ್ಪಂದಗಳನ್ನು ಮಾಡಿಕೊಳ್ಳಬೇಕು ಎಂಬುದು ಟ್ರಂಪ್ ಅವರ ನಿರೀಕ್ಷೆಯಾಗಿದೆ. ಈ ಹಿನ್ನೆಲೆಯಲ್ಲಿ, ಜಗತ್ತಿನ ವಿವಿಧ ಮಾರುಕಟ್ಟೆಗಳು ಸದ್ಯಕ್ಕಂತೂ ಸಮಾಧಾನದ ನಿಟ್ಟುಸಿರು ಬಿಟ್ಟಿವೆ.

### ಹೊಸ ಸುಂಕ ನೀತಿಯಿಂದ ಅಮೆರಿಕಕ್ಕೆ ಲಾಭವೇ, ಇಲ್ಲ ನಷ್ಟವೇ?

ಟ್ರಂಪ್ ಅವರ ಈ ಸುಂಕನೀತಿಯು ಅಮೆರಿಕಕ್ಕೆ ನಿಜವಾಗಿಯೂ ಒಳಿತನ್ನು ತರುತ್ತದೆಯೇ? ಇತರ ದೇಶಗಳ ಮೇಲೆ ಇದರಿಂದಾಗುವ ಪರಿಣಾಮಗಳೇನು? ಇದು ಜಾಗತಿಕ ಆರ್ಥಿಕ ಹಿಂಜರಿತಕ್ಕೆ ಕಾರಣವಾಗದೇ? ಈ ವಿಷಯಗಳ ಬಗೆಗೆ ದೀರ್ಘ ಚರ್ಚೆಗಳಾಗುತ್ತಿವೆ. ಟ್ರಂಪ್ ಅವರೇನೋ ಈ ಕ್ರಮವು ತಮ್ಮ ದೇಶದ ಆರ್ಥಿಕತೆಯನ್ನು ಬಲಪಡಿಸುತ್ತದೆ ಎನ್ನುತ್ತಾರೆ. ಆದರೆ, ಇದು, ಅಮೆರಿಕದ ಆರ್ಥಿಕತೆಯನ್ನು ಬಲಪಡಿಸುವ ಬದಲು ನಾಶಗೊಳಿಸುತ್ತದೆ. ಅಲ್ಲಿ ಹಲವಾರು ಉತ್ಪನ್ನಗಳ ಬೆಲೆ ಹೆಚ್ಚಾಗುವ ಕಾರಣ ಹಣದುಬ್ಬರ ತೀವ್ರವಾಗುತ್ತದೆ ಎಂಬುದು ಹಲವು ಅರ್ಥಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಏಕೆಂದರೆ, ಅಮೆರಿಕವು ತನ್ನ ಬಹಳಷ್ಟು ಉತ್ಪನ್ನಗಳಿಗಾಗಿ ವಿವಿಧ ದೇಶಗಳನ್ನು ಅವಲಂಬಿಸಿದೆ. ಅದರಲ್ಲೂ ತಯಾರಿಕಾ ವಲಯದ ಉತ್ಪನ್ನಗಳಿಗಂತೂ ಏಷ್ಯಾದ ಚೀನಾ, ತೈವಾನ್, ಥಾಯ್ಲೆಂಡ್, ವಿಯೆಟ್ನಾಂ ಇತ್ಯಾದಿ ದೇಶಗಳು ಅಮೆರಿಕಕ್ಕೆ ಪ್ರಧಾನ ಆಕರಗಳಾಗಿವೆ.

ಅಮೆರಿಕದಲ್ಲಿ ನಿರುದ್ಯೋಗವೇನೂ ದೊಡ್ಡ ಸಮಸ್ಯೆಯಾಗಿ ಕಾಡುತ್ತಿಲ್ಲ. ಜೊತೆಗೆ, ಹಣದುಬ್ಬರವೂ ನಿಯಂತ್ರಣದಲ್ಲಿದೆ. ಆರ್ಥಿಕ ಬೆಳವಣಿಗೆಯೂ ಸಮಾಧಾನಕರವಾಗಿದೆ. ಇಂತಹ ಸಂದರ್ಭದಲ್ಲಿ, ಈ ಸುಂಕ ಹೇರಿಕೆಯ ಅಗತ್ಯವೇ ಇರಲಿಲ್ಲ ಎಂಬ ಟೀಕೆಗಳು ಸಹ ಕೇಳಿ ಬರುತ್ತಿವೆ. ಸ್ವತಃ ಟ್ರಂಪ್ ಅವರ ರಿಪಬ್ಲಿಕನ್ ಪಕ್ಷದ ಹಲವು ನಾಯಕರೇ ವಿರೋಧದ ಮಾತುಗಳನ್ನಾಡಿದ್ದಾರೆ. ಟ್ರಂಪ್ ಅವರ ಕಟ್ಟಾ ಬೆಂಬಲಿಗರಾಗಿರುವ ಉದ್ಯಮಿ ಈಲಾನ್ ಮಸ್ಕ್ ಕೂಡ ಒಂದರ್ಥದಲ್ಲಿ ಈ ನೀತಿಗೆ ತಮ್ಮ ಅಸಮ್ಮತಿ ಹೊರಹಾಕಿದ್ದಾರೆ. ಅಮೆರಿಕದ ಉದ್ಯಮಿಗಳು ಭಾರತ, ಚೀನಾ ಸೇರಿದಂತೆ ಹಲವೆಡೆ ಹೂಡಿಕೆ ಮಾಡಿದ್ದು, ಅವರಂತೂ ಇದನ್ನು ಒಪ್ಪಲು ಸುತರಾಂ ಸಿದ್ಧವಿಲ್ಲ. ಅಮೆರಿಕದ ಮುಂಚೂಣಿ ಬ್ಯಾಂಕ್ ಆದ ಜೆ.ಪಿ. ಮೋರ್ಗನ್, ಈ ಸುಂಕ ನೀತಿಯಿಂದಾಗಿ ಜಾಗತಿಕ ಆರ್ಥಿಕ ಹಿಂಜರಿತದ ಸಾಧ್ಯತೆಯಿದೆ ಎಂದು ಅಭಿಪ್ರಾಯಪಟ್ಟಿದೆ. ಇವೆಲ್ಲದರ ನಡುವೆಯೇ ಏಪ್ರಿಲ್ 5ರಂದು ಅಮೆರಿಕದ ಎಲ್ಲಾ 50 ರಾಜ್ಯಗಳಲ್ಲೂ ಟ್ರಂಪ್ ನಿರ್ಧಾರದ ವಿರುದ್ಧ ಬೃಹತ್ "ಹ್ಯಾಂಡ್ಸ್ ಆಫ್" ಪ್ರತಿಭಟನೆ ನಡೆಯಿತು.

ಸದ್ಯ ಚೀನಾವು ಅಮೆರಿಕಕ್ಕೆ ರಫ್ತು ಮಾಡುವ ಉತ್ಪನ್ನಗಳ ಮೌಲ್ಯ ವಾರ್ಷಿಕ 550 ಬಿಲಿಯನ್ ಡಾಲರ್‌ನಷ್ಟಿದೆ. ಈಗ ಅಮೆರಿಕವು ಈ ಉತ್ಪನ್ನಗಳಿಗೆ ಶೇ. 125ರಷ್ಟು ಸುಂಕ ವಿಧಿಸಿದರೆ ಅದು ಅಂತಿಮವಾಗಿ ವರ್ಗಾವಣೆಯಾಗುವುದು ಅಲ್ಲಿನ ನಾಗರಿಕರಿಗೆ ಹೊರತು ಬೇರಾರಿಗೂ ಅಲ್ಲ. ಹೀಗಾಗಿ, ಈಗ ಹೇರಿರುವ ಸಾರಾಸಗಟು ಸುಂಕದ ಹೇರಿಕೆಯು ಅಮೆರಿಕದ ಜನರ ಜೀವನವನ್ನು ತೀವ್ರವಾಗಿ ದುಬಾರಿಗೊಳಿಸುತ್ತದೆ.

### ಭಾರತದ ಮೇಲೆ ಆಗುವ ಪರಿಣಾಮ

ಇನ್ನು, ಭಾರತದ ವಿಷಯಕ್ಕೆ ಬಂದರೆ, ಈ ಸುಂಕ ಹೇರಿಕೆಯು ಒಂದಷ್ಟು ಮಟ್ಟಿಗೆ ದುಷ್ಪರಿಣಾಮ ಬೀರುತ್ತದೆಯಾದರೂ, ಅದು ತೀವ್ರವಾಗಿರದು ಎಂಬ ಅಭಿಪ್ರಾಯಗಳಿವೆ. ಭಾರತವು ಗ್ರಾಹಕ ಪ್ರಧಾನ ದೇಶವಾಗಿರುವುದು ಇದಕ್ಕೆ ಕಾರಣ. ಅಂದರೆ, ನಾವು ಉತ್ಪಾದಿಸುವ ವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿ ದೇಶೀಯ ಮಾರುಕಟ್ಟೆಯಲ್ಲೇ ಬಳಕೆಯಾಗುತ್ತವೆ. ಅಮೆರಿಕಕ್ಕೆ ನಾವು ಮಾಡುವ ರಫ್ತಿನ ಪ್ರಮಾಣವು ವಾರ್ಷಿಕ 85 ಬಿಲಿಯನ್ ಡಾಲರ್ ಆಸುಪಾಸಿನಲ್ಲಿದ್ದರೆ, ಚೀನಾವು ಅಮೆರಿಕಕ್ಕೆ ಮಾಡುವ ರಫ್ತು ಮೌಲ್ಯವು ವಾರ್ಷಿಕ 500 ಬಿಲಿಯನ್ ಡಾಲರ್‌ಗೂ ಅಧಿಕವಿದೆ. ತೈವಾನ್, ವಿಯೆಟ್ನಾಂ, ಜರ್ಮನಿಗಳು ಅಮೆರಿಕಕ್ಕೆ ಕಳಿಸುವ ರಫ್ತುಮೌಲ್ಯವು ಕೂಡ ಭಾರತಕ್ಕೆ ಹೋಲಿಸಿದರೆ ಅಧಿಕವಿದೆ. ಇದೇ ಕಾರಣಕ್ಕೆ, ನಮ್ಮ ಕೈಗಾರಿಕೆಗಳಿಗೆ ಟ್ರಂಪ್ ಸುಂಕದ ಹೊಡೆತವು ಇತರ ದೇಶಗಳಿಗೆ ಹೋಲಿಸಿದರೆ ಕಡಿಮೆಯಿರುತ್ತದೆ. ಅಂದಾಜಿನ ಪ್ರಕಾರ, ಇದು ವಾರ್ಷಿಕ 5.7 ಬಿಲಿಯನ್ ಡಾಲರ್ ಇರಬಹುದು ಎನ್ನಲಾಗಿದೆ. ಇದೇ ವೇಳೆ, ಈ ಸುಂಕ ಸಮರವನ್ನು ಗಮನದಲ್ಲಿರಿಸಿಕೊಂಡು, ಭಾರತೀಯ ರಿಸರ್ವ್ ಬ್ಯಾಂಕಿನ ಇತ್ತೀಚಿನ ಮಾನಿಟರಿ ಪಾಲಿಸಿ ಸಭೆಯು ನಮ್ಮ ದೇಶದ ಜಿಡಿಪಿ ಬೆಳವಣಿಗೆ ದರವನ್ನು 2026ರ ಹಣಕಾಸು ವರ್ಷಕ್ಕೆ ಶೇ 6.7ರಿಂದ ಶೇ 6.5ಕ್ಕೆ ಪರಿಷ್ಕರಿಸಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಸಂಜಯ್ ಮಲ್ಹೋತ್ರ ಅವರು ಈ ಬಗ್ಗೆ ವಿವರಣೆ ನೀಡಿ, "ಅಮೆರಿಕದ ಸುಂಕ ನೀತಿಯ ಪರಿಣಾಮದಿಂದಾಗಿ ಇಲ್ಲಿ ಹಣದುಬ್ಬರ ಉಂಟಾಗುವ ಸಾಧ್ಯತೆ ಬಗ್ಗೆ ನಾವು ಅಷ್ಟೇನೂ ಚಿಂತಿತರಾಗಿಲ್ಲ. ಆದರೆ, ಇದು ಆರ್ಥಿಕ ಬೆಳವಣಿಗೆಯನ್ನು ತಗ್ಗಿಸಬಹುದೇ ಎಂಬುದೇ ನಮ್ಮ ಮುಂದಿರುವ ವಿಚಾರಾರ್ಹವಾದ ಪ್ರಶ್ನೆಯಾಗಿದೆ" ಎಂದಿದ್ದಾರೆ. "ಜಗತ್ತಿಗೆಲ್ಲಾ ಜಾಗತೀಕರಣ, ಉದಾರೀಕರಣದ ಬೋಧನೆ ಮಾಡಿದ್ದ ಅಮೆರಿಕದ ಈಗಿನ ಸುಂಕನೀತಿಯನ್ನು ಒಪ್ಪಲಾಗದು" ಎಂದಿರುವ ಆರ್.ಬಿ.ಐ.ನ ಮಾಜಿ ಗವರ್ನರ್ ರಘುರಾಮ್ ರಾಜನ್ ಅವರ ಮಾತು ಕೂಡ ಇಲ್ಲಿ ಉಲ್ಲೇಖಾರ್ಹ.

ಅಮೆರಿಕದ ಸುಂಕದ ಈ ನೀತಿಯನ್ನು ಭಾರತವು ತನ್ನ ಪಾಲಿಗೆ ಒಂದು ಸದವಕಾಶವನ್ನಾಗಿಯೂ ಬಳಸಿಕೊಳ್ಳಲು ಸಾಧ್ಯವಿದೆಯೆಂಬ ಅಭಿಪ್ರಾಯಗಳಿವೆ. ಏಕೆಂದರೆ, ಪ್ರಮುಖವಾಗಿ ಚೀನಾಗೆ ಅತ್ಯಧಿಕ ತೆರಿಗೆ ವಿಧಿಸಿರುವುದರಿಂದ ಅಲ್ಲಿ ತಮ್ಮ ಘಟಕ ಸ್ಥಾಪಿಸಿರುವ ಹಲವು ಕಂಪನಿಗಳು ಅವನ್ನು ಭಾರತಕ್ಕೆ ಸ್ಥಳಾಂತರಿಸುವ ಬಗ್ಗೆ ಆಲೋಚಿಸಲು ಮುಂದಾಗಬಹುದು. ಅಂತಹ ಸನ್ನಿವೇಶದಲ್ಲಿ, ಭಾರತ ಸರ್ಕಾರವು ಸೂಕ್ತವಾಗಿ ಸ್ಪಂದಿಸಿ ಅಂತಹ ಕಂಪನಿಗಳ ಘಟಕ ಸ್ಥಾಪನೆಗೆ ನಮ್ಮಲ್ಲಿ ಅನುವು ಮಾಡಿಕೊಟ್ಟರೆ ನಾವು ಜಾಗತಿಕ ತಯಾರಿಕಾ ವಲಯದ ನೆಲೆಯಾಗಿ ಬಲವರ್ಧನೆಗೊಳ್ಳಬಹುದು.

### ಜಾಗತೀಕರಣದ ನೀತಿಯಿಂದ ಜಗತ್ತು ಹಿಂದಕ್ಕೆ ಸರಿಯುತ್ತಿದೆಯೇ?

ಜಾಗತೀಕರಣ ಹಾಗೂ ಉದಾರೀಕರಣದ ಈ ಕಾಲಘಟ್ಟದಲ್ಲಿ ಆಮದು ಉತ್ಪನ್ನಗಳಿಗೆ ಸಾರಾಸಗಟು ಸುಂಕ ಹೇರುವಿಕೆ ಅಷ್ಟು ಸುಲಭವೂ ಇಲ್ಲ. ಇಲ್ಲಿ ದೇಶ ದೇಶಗಳ ನಡುವೆ ಪರಸ್ಪರ ಅವಲಂಬನೆ, ಸಹಭಾಗಿತ್ವ, ಪಾಲುದಾರಿಕೆ, ವಿದೇಶಿ ಹೂಡಿಕೆ ಇವೆಲ್ಲವೂ ಇರುತ್ತದೆ. ಉದಾಹರಿಸುವುದಾದರೆ, ಅಮೆರಿಕವು ತನ್ನ ಐಟಿ ಸೇವೆಗಳಿಗೆ ಹೆಚ್ಚಾಗಿ ಭಾರತವನ್ನು ಅವಲಂಬಿಸಿದೆ. ಹೀಗಾಗಿ, ಭಾರತ ಒದಗಿಸುವ ಐಟಿ ಸೇವೆಗಳಿಗೆ ಸುಂಕ ವಿಧಿಸುವ ನಿರ್ಧಾರಕ್ಕೆ ಅದು ಮುಂದಾಗಿಲ್ಲ. ಅದೇ ರೀತಿ, ಯುದ್ಧೋಪಕರಣ ತಯಾರಿಕೆಗೆ ಅತ್ಯಗತ್ಯವಾದ ವಿರಳ ಲೋಹಗಳಿಗೆ ಅದು ಚೀನಾವನ್ನು ಅಧಿಕವಾಗಿ ನೆಚ್ಚಿಕೊಂಡಿದೆ. ಒಂದು ವೇಳೆ, ಚೀನಾ ಕಠಿಣ ನಿರ್ಧಾರ ತೆಗೆದುಕೊಂಡರೆ ಅದು ಅಮೆರಿಕದ ಯುದ್ಧೋಪಕರಣ ಉದ್ಯಮದ ಮೇಲೆ ತೀವ್ರ ವ್ಯತಿರಿಕ್ತ ಪರಿಣಾಮವಾಗುತ್ತದೆ.

ಈ ಮಧ್ಯೆ ಭಾರತವು ಅಮೆರಿಕದೊಂದಿಗೆ ಸಂಘರ್ಷಕ್ಕಿಂತ ಸಹಕಾರ ಧೋರಣೆಯಲ್ಲಿ ಮುಂದುವರಿದು ಸುಂಕದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಸುಳಿವು ನೀಡಿದೆ. ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಫೆಬ್ರವರಿಯಲ್ಲಿ ಅಮೆರಿಕಕ್ಕೆ ಭೇಟಿ ನೀಡಿದ್ದಾಗಲೇ ಇದಕ್ಕೆ ಭೂಮಿಕೆ ಸಿದ್ಧಗೊಂಡಿದೆ; ಎರಡೂ ದೇಶಗಳು ಪರಸ್ಪರ ಅನುಕೂಲವನ್ನು ದೃಷ್ಟಿಯಲ್ಲಿರಿಸಿಕೊಂಡು ದ್ವಿಪಕ್ಷೀಯ ವಾಣಿಜ್ಯ ಒಪ್ಪಂದಕ್ಕೆ ಅಂಕಿತ ಹಾಕಲಿವೆ ಎಂಬ ವರದಿಗಳಿವೆ. ಈಗ ಟ್ರಂಪ್ ಅವರ ಸುಂಕ ಏರಿಕೆಗೆ ನೀಡಿರುವ 90 ದಿನಗಳ ವಿರಾಮದ ಅವಧಿಯಲ್ಲಿ ಭಾರತ ಹಾಗೂ ಅಮೆರಿಕ ನಡುವಿನ ಸಂಧಾನವು ಮತ್ತೊಂದು ಸಕಾರಾತ್ಮಕ ಆಯಾಮ ಪಡೆದುಕೊಳ್ಳುವ ಸಾಧ್ಯತೆಯೂ ಇದೆ.

ಮತ್ತೊಂದೆಡೆ, ಈ ಸುಂಕ ಹೇರಿಕೆಯು ಜಾಗತಿಕ ಆರ್ಥಿಕ ಹಿಂಜರಿತಕ್ಕೆ ಎಡೆಮಾಡಿಕೊಟ್ಟಿದ್ದೇ ಆದರೆ, ಅದು ಕಚ್ಚಾ ತೈಲದ ದರ ಇಳಿಕೆಗೆ ಕಾರಣವಾಗುತ್ತದೆ. ಸುಂಕ ಹೇರಿಕೆಗೆ ಮುನ್ನ ಬ್ಯಾರೆಲ್ಲಿಗೆ 75ರಿಂದ 80 ಡಾಲರ್‌ನಷ್ಟಿದ್ದ ಬ್ರೆಂಟ್ ಬೆಲೆ ಈಗಾಗಲೇ ಸುಮಾರು 65 ಡಾಲರ್ ಆಜುಬಾಜಿಗೆ ಇಳಿದಿದೆ. ಭಾರತವು ಕಚ್ಚಾ ತೈಲವನ್ನು ಅತ್ಯಧಿಕ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವುದರಿಂದ (ಒಟ್ಟು ಬೇಡಿಕೆಯ ಶೇ 80ರಷ್ಟು), ಅಷ್ಟರ ಮಟ್ಟಿಗೆ ವಿದೇಶಿ ವಿನಿಮಯ ಉಳಿತಾಯವಾಗುತ್ತದೆ. ಸರ್ಕಾರವು ಹೀಗೆ ತನಗೆ ಉಳಿತಾಯವಾಗುವ ಹಣವನ್ನು ದೇಶೀಯ ಎಂಎಸ್‌ಎಂಇ ವಲಯವನ್ನು ಉತ್ತೇಜಿಸಲು ಬಳಸಬಹುದು.

▶▶ 3ನೇ ಪುಟಕ್ಕೆ...

ಪತ್ರಿಕೆಯ ಬಳಗ

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**

ಪುಟ ವಿನ್ಯಾಸ:
**ಸುಮಾ ಸಾಗರ್**

# ಪ್ರಧಾನಮಂತ್ರಿ

ನವ ದೆಹಲಿ
ಚೈತ್ರ 18, ಶಕ ಸಂ. 1947
08 ಏಪ್ರಿಲ್, 2025

**ಡಾ. ಎಂ.ಆರ್. ಹುಲಿನಾಯ್ಕರ್ ಜೀ,**

ನಿಮ್ಮ ಪತ್ರವನ್ನು ಸ್ವೀಕರಿಸಿದ್ದೇನೆ. ಕೇಂದ್ರ ಬಜೆಟ್ ಬಗ್ಗೆ ನಿಮ್ಮ ಮೆಚ್ಚುಗೆಯ ಅಭಿಪ್ರಾಯಗಳನ್ನು ನೋಡಿ ನನಗೆ ಸಂತೋಷವಾಗಿದೆ. ನಿಮ್ಮ ಸೌಹಾರ್ದಯುತ ಹಾಗೂ ಸಕಾರಾತ್ಮಕ ಅಭಿಪ್ರಾಯಗಳಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಬಜೆಟ್ ಕೇವಲ ಆರ್ಥಿಕ ಸಂಖ್ಯೆಗಳ, ಅಂಕಿಅಂಶಗಳ ಕೋಷ್ಟಕವಲ್ಲ, ಬದಲಾಗಿ 140 ಕೋಟಿ ಜನರ ಕನಸುಗಳು, ನಿರೀಕ್ಷೆಗಳು ಮತ್ತು ಆಶೋತ್ತರಗಳನ್ನು ಸಾಕಾರಗೊಳಿಸುವ ಮಾಧ್ಯಮವಾಗಿದೆ. ಈ ಬಜೆಟ್‌ನ ಮೂಲ ಆಶಯವು ಜನಸಾಮಾನ್ಯರ ಕಲ್ಯಾಣದ ಮೂಲಕ ರಾಷ್ಟ್ರದ ಅಭಿವೃದ್ಧಿಯಲ್ಲಿ ಸಾರ್ವಜನಿಕ ಸಹಭಾಗಿತ್ವವನ್ನು ಒಳಗೊಳ್ಳುವ ತತ್ತ್ವವಾಗಿದೆ.

ಪ್ರತಿಯೊಬ್ಬ ನಾಗರಿಕನೂ ದೇಶದ ಅಭಿವೃದ್ಧಿಯ ಪಯಣದಲ್ಲಿ ಸಕ್ರಿಯ ಪಾಲುದಾರನಾಗಬೇಕು ಎಂಬ ಉದ್ದೇಶವನ್ನು ನಮ್ಮ ಸರ್ಕಾರವು ಹೊಂದಿದೆ. ಈ ದೃಷ್ಟಿಯಿಂದ ಉಳಿತಾಯ, ಬಂಡವಾಳ ಹೂಡಿಕೆ, ಉತ್ಪಾದಿತ ವಸ್ತುಗಳ ಬಳಕೆ ಮತ್ತು ಅಭಿವೃದ್ಧಿಗೆ ಉತ್ತೇಜನ ನೀಡುವಂತೆ ಕೇಂದ್ರ ಸರ್ಕಾರದ ಈ ಬಜೆಟ್ಟನ್ನು ರೂಪಿಸಲಾಗಿದೆ.

ಇದು ಯುವಕರಿಗೆ ಅವಕಾಶಗಳನ್ನು ಸೃಷ್ಟಿಸುತ್ತದೆ, ಮಹಿಳೆಯರ ನೇತೃತ್ವದಲ್ಲಿ ಅಭಿವೃದ್ಧಿಗೆ ಪ್ರೋತ್ಸಾಹ ನೀಡುತ್ತದೆ, ರೈತರನ್ನು ಸಬಲಗೊಳಿಸುತ್ತದೆ ಮತ್ತು ಜನತೆಗೆ ಭಾರೀ ತೆರಿಗೆ ರಿಯಾಯಿತಿಯನ್ನು ನೀಡಿದೆ. ಮಧ್ಯಮ ವರ್ಗದವರಿಗೆ ನೀಡಲಾಗಿರುವ ತೆರಿಗೆ ವಿನಾಯಿತಿಯಿಂದ ಅವರ ಜೀವನಮಟ್ಟವು ಇನ್ನಷ್ಟು ಉತ್ತಮವಾಗಲಿದೆ.

ಈ ಬಜೆಟ್ಟಿನಲ್ಲಿ ತಾತ್ಕಾಲಿಕ ಉದ್ಯೋಗಿಗಳಿಂದ ಆರಂಭಿಸಿ ಜಾಗತಿಕ ಮಾರುಕಟ್ಟೆಯಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಭಾರತೀಯ ಉತ್ಪನ್ನಗಳಿಗೆ, ಹಾಗೂ ನೌಕಾನಿರ್ಮಾಣದಿಂದ ಪ್ರವಾಸೋದ್ಯಮ, ಕ್ಲೀನ್ ಟೆಕ್‌ನಿಂದ ಡೀಪ್ ಟೆಕ್‌ವರೆಗೆ ಎಲ್ಲ ಕ್ಷೇತ್ರಗಳಿಗೂ ಪ್ರೋತ್ಸಾಹ ನೀಡಲು ದೃಢ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

2047ರೊಳಗೆ 'ವಿಕಸಿತ ಭಾರತ'ದ ಗುರಿಯನ್ನು ಸಾಧಿಸುವ ಪಯಣದಲ್ಲಿ ಈ ಬಜೆಟ್ ಒಂದು ಪ್ರಮುಖ ಹೆಜ್ಜೆಯಾಗಿದೆ. ನಿಮ್ಮಂತಹ ಜಾಗೃತ ನಾಗರಿಕರ ಸಹಕಾರವು ಈ ಪಯಣವನ್ನು ಯಶಸ್ವಿಗೊಳಿಸಲು ಸಹಕಾರಿಯಾಗುತ್ತದೆ.

ನಿಮ್ಮ ಪ್ರೀತಿಗೆ, ನಂಬಿಕೆಗೆ ಮತ್ತು ಶುಭಾಶಯಗಳಿಗೆ ಮತ್ತೊಮ್ಮೆ ಧನ್ಯವಾದಗಳು.

ನಿಮ್ಮ,
(ನರೇಂದ್ರ ಮೋದಿ)

**ಡಾ. ಎಮ್. ಆರ್. ಹುಲಿನಾಯ್ಕರ್,**
**ಶಿವದೀಪ್ತಿ**
**3ನೆಯ ಅಡ್ಡರಸ್ತೆ, ಸೋಮೇಶ್ವರ ಬಡಾವಣೆ**
**ತುಮಕೂರು**
**ಕರ್ನಾಟಕ 572 103.**



# ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರ ಸುಂಕ-ವರವೋ? ಶಾಪವೋ?

▶▶ ಎರಡನೇ ಪುಟದಿಂದ

ಇದರಿಂದ ಉದ್ಯೋಗಸೃಷ್ಟಿಯ ಜೊತೆಗೆ ದೇಶೀಯ ಉತ್ಪಾದನೆಯನ್ನು ಸದೃಢಗೊಳಿಸಬಹುದು ಎಂಬ ವ್ಯಾಖ್ಯಾನಗಳೂ ಇವೆ.

**ಸುಂಕ ನೀತಿಯ ಹಿಂದೆ ಸಂಚಿದೆಯೇ?**

ಇವೆಲ್ಲದರ ನಡುವೆಯೇ, ಟ್ರಂಪ್ ಅವರ ಈ ಸುಂಕ ಹೇರಿಕೆ ನಿರ್ಧಾರವೇ ಒಂದು ಮಹಾನ್ ಸಂಚು ಎಂಬ ವ್ಯಾಖ್ಯಾನವೂ ಬಲವಾಗಿದೆ. ಈಗ ಅಮೆರಿಕದ ಸಾಲದ ಮೊತ್ತವು 36 ಟ್ರಿಲಿಯನ್ ಡಾಲರ್‌ಗಳಷ್ಟಿದ್ದು, ಅದು ವಾರ್ಷಿಕ ಒಂದು ಟ್ರಿಲಿಯನ್ನನ್ನು, ಅಂದರೆ ತನ್ನ ಆದಾಯದ ಪಾಲಿನ ಶೇ. 25ರಷ್ಟನ್ನು ಸಾಲದ ಬಡ್ಡಿಗಾಗಿಯೇ ನೀಡುತ್ತಿದೆ. ಸುಂಕ ವಿಧಿಸಿ ಷೇರುಪೇಟೆ ಕುಸಿಯುವಂತೆ ಮಾಡಿ ಆರ್ಥಿಕ ಹಿಂಜರಿತದ ವಾತಾವರಣ ಸೃಷ್ಟಿಸಿದರೆ ಆಗ ಅಲ್ಲಿನ ಫೆಡ್ ಬ್ಯಾಂಕ್ ಬಡ್ಡಿಯನ್ನು ಕಡಿಮೆಗೊಳಿಸುತ್ತದೆ. ಆಗ ತಾನು ನೀಡಬೇಕಾದ ಬಡ್ಡಿಯ ಹೊರೆಯೂ ಕಡಮೆಯಾಗುತ್ತದೆ ಎಂಬ ಲೆಕ್ಕಾಚಾರ ಇದರ ಹಿಂದಿದೆ ಎಂದು ವಿವರಿಸಲಾಗುತ್ತಿದೆ.

**ಚೀನಾದ ನಡೆ**

ಇನ್ನೊಂದೆಡೆ, ಚೀನಾ ಹಾಗೂ ಇನ್ನಿತರ ಕೆಲ ದೇಶಗಳು ಟ್ರಂಪ್ ಅವರ ಈ ಲೆಕ್ಕಾಚಾರವನ್ನು ಅವರಿಗೇ ತಿರುಗು ಬಾಣವಾಗಿಸಲು ಮುಂದಾಗಿವೆ. ಚೀನಾ ಪ್ರಸ್ತುತ ತನ್ನಲ್ಲಿರುವ ಅಂದಾಜು 750 ಬಿಲಿಯನ್ ಡಾಲರ್ ಮೌಲ್ಯದಷ್ಟಿರುವ ಅಮೆರಿಕದ ಸಾಲದ ಬಾಂಡ್‌ಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ನಿರ್ಧರಿಸಿದೆ. ಹೀಗಾಗಿದ್ದೇ ಆದಲ್ಲಿ, ಅದು ಅಮೆರಿಕದ ಸಾಲದ ಬಾಂಡ್‌ಗಳಿಗೆ ಬೇಡಿಕೆಯನ್ನು ತಗ್ಗಿಸಿ ಆ ದೇಶಕ್ಕೆ ಹಣದ ಲಭ್ಯತೆಯನ್ನು ಇಲ್ಲವಾಗಿಸುತ್ತದೆ. ಈ ಆತಂಕವೇ ಟ್ರಂಪ್ ಅವರು ತಮ್ಮ ಸುಂಕ ನೀತಿಗೆ ಏಕಾಏಕಿ 90 ದಿನಗಳ ವಿರಾಮ ಪ್ರಕಟಿಸಲು ಕಾರಣ ಎಂಬ ವಿಶ್ಲೇಷಣೆಗಳು ಸಾಕಷ್ಟು ಸದ್ದುಮಾಡುತ್ತಿವೆ.

**ಕಾದು ನೋಡೋಣ!**

ಉದ್ಯಮ ವಲಯವು ಯಾವಾಗಲೂ ಸ್ಥಿರತೆ, ನಿಶ್ಚಿತತೆ ಹಾಗೂ ನೀತಿಗಳ ನಿರಂತರತೆಯನ್ನು ನಿರೀಕ್ಷಿಸುತ್ತದೆ. ಆದರೆ, ಸುಂಕದ ವಿಷಯದಲ್ಲಿ ಟ್ರಂಪ್ ಅವರ ನಡೆಯು ಜಾಗತಿಕ ವಾಣಿಜ್ಯ-ವಹಿವಾಟಿನ ಮೇಲೆ ಅನಿಶ್ಚಿತತೆ ಮುಸುಕುವಂತೆ ಮಾಡಿದೆ. ಅಂತಿಮವಾಗಿ ಇದು ಬೀರಲಿರುವ ಪರಿಣಾಮವೇನೆಂಬುದರ ಬಗೆಗೆ ಮೂರು ತಿಂಗಳಲ್ಲಿ ಒಂದು ಮಟ್ಟಿಗೆ ಅಂದಾಜು ಸಿಗುವ ಸಾಧ್ಯತೆಗಳಿವೆ.

▪ ನಿರೂಪಣೆ: ವೆಂಕಟೇಶ್ ಪ್ರಸಾದ್ ಬಿ.ಎಸ್.

# ರೋಗಿಗಳ ಚಿಕಿತ್ಸೆ, ಆರೈಕೆಯಲ್ಲಿ ಶುಶ್ರೂಷಕರ ಪಾತ್ರವೇ ಪ್ರಧಾನ




**2025ನೇ ಸಾಲಿನ ಪ್ರಥಮ ವರ್ಷದ ಡಿಪ್ಲೋಮೋ ನರ್ಸಿಂಗ್ ಮತ್ತು ಬಿ.ಎಸ್‌ಸಿ. ನರ್ಸಿಂಗ್ ವಿದ್ಯಾರ್ಥಿಗಳ ದೀಪೋತ್ಸವ ಮತ್ತು ಪ್ರತಿಜ್ಞಾವಿಧಿ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರು.**

'ರೋಗಿಗಳ ಸಂಪೂರ್ಣ ಚಿಕಿತ್ಸೆ, ಆರೈಕೆಯಲ್ಲಿ ಶುಶ್ರೂಷಕರ ಪಾತ್ರವು ಪ್ರಧಾನ ಮತ್ತು ನಿರ್ಣಾಯಕವಾಗಿರುತ್ತದೆ' ಎಂದು ಕೇಂದ್ರ ರೈಲ್ವೆ ಖಾತೆ ಸಹಾಯಕ ಸಚಿವ ವಿ. ಸೋಮಣ್ಣ ಅವರು ಹೇಳಿದ್ದಾರೆ.

ಶ್ರೀದೇವಿ ನರ್ಸಿಂಗ್ ಕಾಲೇಜು, ರಮಣ ಮಹರ್ಷಿ ನರ್ಸಿಂಗ್ ಶಾಲೆ, ಜಂಟಿಯಾಗಿ ಏರ್ಪಡಿಸಿದ್ದ 2025 ನೇ ಸಾಲಿನ ಪ್ರಥಮ ವರ್ಷದ ಡಿಪ್ಲೋಮೋ ನರ್ಸಿಂಗ್ ಮತ್ತು ಬಿ.ಎಸ್‌ಸಿ. ನರ್ಸಿಂಗ್ ವಿದ್ಯಾರ್ಥಿಗಳ ದೀಪೋತ್ಸವ ಮತ್ತು ಪ್ರತಿಜ್ಞಾವಿಧಿ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ರೋಗಿಯ ಚಿಕಿತ್ಸಾ ಕಾರ್ಯದಲ್ಲಿ ವೈದ್ಯರು 40 ಭಾಗ ಕಾರ್ಯನಿರ್ವಹಿಸಿದರೆ ಉಳಿದ ಶೇಕಡ 60 ಭಾಗವನ್ನು ಶುಶ್ರೂಷಕರು ನಿರ್ವಹಿಸುತ್ತಾರೆ. ಹೀಗಾಗಿ ಆಸ್ಪತ್ರೆಗಳ ಯಶಸ್ಸಿನಲ್ಲಿ ಅವರ ಪಾತ್ರ ಬಹಳ ಪ್ರಮುಖವಾಗಿದೆ. ವಿಕ್ಟೋರಿಯಾ, ಬೌರಿಂಗ್, ಕಿದ್ವಾಯಿ ಆಸ್ಪತ್ರೆಗಳ ಆಡಳಿತ ಮಂಡಳಿಯ ಸದಸ್ಯನಾಗಿ ನನ್ನ ಅನುಭವದ ಆಧಾರದ ಮೇಲೆ ಈ ಮಾತನ್ನು ಹೇಳುತ್ತಿದ್ದೇನೆ. ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯಕ್ಕರ್ ಅವರು ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಸಾವಿರಾರು ಮಕ್ಕಳಿಗೆ ವಿದ್ಯಾದಾನ ಮಾಡುತ್ತಿರುವುದು ಕಡಿಮೆ ಸಾಧನೆ ಅಲ್ಲ ಎಂದು ಸಚಿವರಾದ ಸೋಮಣ್ಣ ಅವರು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಡಾ. ರಜನಿ ಮಾತನಾಡಿ ಇತ್ತೀಚೆಗೆ "ನರ್ಸಿಂಗ್ ವೃತ್ತಿಗೆ ಪುರುಷರು ಪ್ರವೇಶ ಪಡೆಯುತ್ತಿದ್ದಾರೆ ಶ್ರೀಲಂಕಾ, ಕೇರಳದಿಂದ ಹೆಚ್ಚಿನ ವಿದ್ಯಾರ್ಥಿಗಳು ನರ್ಸಿಂಗ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯುತ್ತಿದ್ದಾರೆ. ಕರ್ನಾಟಕದ ಗ್ರಾಮೀಣ ಪ್ರದೇಶದ ಮಕ್ಕಳು ನರ್ಸಿಂಗ್ ಕೋರ್ಸ್ ಆಯ್ಕೆ ಮಾಡಿಕೊಳ್ಳುತ್ತಿರುವುದು ಉತ್ತಮ ಬೆಳವಣಿಗೆ. ಆರೋಗ್ಯ ಕ್ಷೇತ್ರದಲ್ಲಿ ಡಾ. ಹುಲಿನಾಯ್ಕರ್ ಅವರಿಗೆ ಆಳವಾದ ಅನುಭವ ಮತ್ತು ಉತ್ತಮ ಪ್ರೌಢಿಮೆಗಳು ಇವೆ" ಎಂದರು.

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯ ಸಂತೋಷ್ ಇಂಡಿ ಮಾತನಾಡಿ, "ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ ಜಗತ್ತಿನ ಆರೋಗ್ಯ ಸೇವೆಗೆ ಶುಶ್ರೂಷಕರೇ ಬೆನ್ನೆಲುಬು. ವೈದ್ಯರು ಇಲ್ಲದೆ ಆಸ್ಪತ್ರೆಯನ್ನು ನಡೆಸಬಹುದು. ಆದರೆ ಶುಶ್ರೂಷಕರಿಲ್ಲದೆ ಆಸ್ಪತ್ರೆಯನ್ನು ನಡೆಸುವುದು ಸಾಧ್ಯವಿಲ್ಲ. ಹೀಗಾಗಿ ವೈದ್ಯಕೀಯ ವೃತ್ತಿಯಲ್ಲಿ ಅವರ ಪಾತ್ರ ಅತ್ಯಂತ ನಿರ್ಣಾಯಕವಾಗಿದೆ. ರಾಜ್ಯದಲ್ಲಿ ಈಗ ಒಟ್ಟು 687 ನರ್ಸಿಂಗ್ ಕಾಲೇಜುಗಳಿದ್ದರೂ ಪ್ರವೇಶಕ್ಕೆ ಬೇಡಿಕೆ ಹೆಚ್ಚಾಗುತ್ತಲೇ ಇದೆ. ಬೇರೆ ಕೋರ್ಸ್‌ಗಳಲ್ಲಿ ಪದವಿ ಅನಂತರ ಪ್ರತಿಜ್ಞಾವಿಧಿ ಸ್ವೀಕರಿಸಿದರೆ ಶುಶ್ರೂಷಕರ ಕೋರ್ಸ್‌ಗಳಲ್ಲಿ ತರಗತಿ ಆರಂಭಕ್ಕೆ ಮುನ್ನವೇ ವಿದ್ಯಾಥಿಗಳು ಪ್ರತಿಜ್ಞಾವಿಧಿ ಸ್ವೀಕರಿಸುತ್ತಾರೆ ಎಂದರೆ ಈ ವಿದ್ಯೆಗೆ ಎಷ್ಟು ಮಹತ್ವವಿದೆ, ಗೌರವವಿದೆ ಎಂಬುದನ್ನು ತಿಳಿಯಬೇಕು" ಎಂದರು.

ಶಾಸಕ ಜ್ಯೋತಿಗಣೇಶ್ ಮಾತನಾಡಿ, ಜಗತ್ತಿನಲ್ಲಿ ಆರೋಗ್ಯವಲಯ ವಿಸ್ತಾರಗೊಳ್ಳುತ್ತಿದ್ದು ಅದರಂತೆ ನರ್ಸಿಂಗ್ ಸೇವೆಗೂ ಬೇಡಿಕೆ ಹೆಚ್ಚಾಗುತ್ತಿದೆ. ವೈದ್ಯರಿಗಿಂತಲೂ ಶುಶ್ರೂಷಕರು ಹೆಚ್ಚು ಸಂಪಾದಿಸುವ ಅವಕಾಶಗಳು ಹೇರಳವಾಗಿವೆ.

ಶ್ರೀದೇವಿ ಶಿಕ್ಷಣ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್ ಹುಲಿನಾಯ್ಕರ್ ಅವರು ಮಾತನಾಡಿ, ವೈದ್ಯಕೀಯ ವೃತ್ತಿಯಲ್ಲಿ ಹೆಚ್ಚು ಹೆಚ್ಚು ಕೌಶಲ ಗಳಿಸಿಕೊಂಡ ವಿದ್ಯಾರ್ಥಿಗಳು ತಮ್ಮ ವೃತ್ತಿಯಲ್ಲಿ ಹೆಸರು ಗಳಿಸುತ್ತಾರೆ. ಅವರ ಮಾನವೀಯ ಸೇವೆಯನ್ನು ಸಮಾಜವು ಸದಾ ಗುರುತಿಸುತ್ತಿರುತ್ತದೆ.

ಶ್ರೀದೇವಿ ಚಾರಿಟಬಲ್ ಟ್ರಸ್ಟಿ ಅಂಬಿಕಾ ಹುಲಿನಾಯ್ಕರ್ ಮಾತನಾಡಿ, ಜಗತ್ತಿನಲ್ಲೇ ಪವಿತ್ರ ವೃತ್ತಿಯಾದ ನರ್ಸಿಂಗ್ ವೃತ್ತಿಯನ್ನು ಮತ್ತು ಅದರ ಅಧ್ಯಯನಕ್ಕಾಗಿ ಶ್ರೀದೇವಿ ಕಾಲೇಜನ್ನು ವಿದ್ಯಾರ್ಥಿಗಳು ಮತ್ತು ಪೋಷಕರು ಆಯ್ಕೆ ಮಾಡಿಕೊಂಡಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸಿದರು.

ಸಮಾರಂಭದಲ್ಲಿ ಶ್ರೀದೇವಿ ವೈದ್ಯಕೀಯ ಕಾಲೇಜಿನ ಮೆಡಿಕಲ್ ಡೈರೆಕ್ಟರ್, ರಮಣ್ ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ. ಎಸ್. ಪಾಟೀಲ್, ಟ್ರಸ್ಟಿ ಲಾವಣ್ಯ ಮತ್ತು ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಮುನಿಸ್ವಾಮಿ, ಪ್ರೊ. ಎಸ್. ಉಷಾ ಹಾಗೂ ಪ್ರೊ. ಅಂಬಾ ಮೊದಲಾದವರು ಹಾಜರಿದ್ದರು. 400 ನರ್ಸಿಂಗ್ ವಿದ್ಯಾರ್ಥಿಗಳು ದೀಪೋತ್ಸವ ಮತ್ತು ಪ್ರತಿಜ್ಞಾವಿಧಿಯ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು.

▪ ವರದಿ: ಎನ್. ಆನಂದ



ಪ್ರತಿಜ್ಞಾವಿಧಿ

## ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ

# ಕುರುಬ ಸಾಂಸ್ಕೃತಿಕ ಪರಿಷತ್ತಿನಿಂದ 31 ಕೃತಿಗಳ ಲೋಕಾರ್ಪಣೆ



▶▶ ಮೊದಲನೇ ಪುಟದಿಂದ

ತಾವು ಶಿಕ್ಷಣ ಪಡೆದಿರುವುದು ತಮ್ಮ ಸ್ವಾರ್ಥಕ್ಕೆ ಅಲ್ಲ, ಅವಕಾಶವಂಚಿತ ಸಮುದಾಯಗಳ ವಿಮೋಚನೆಗಾಗಿ ಎಂಬ ಅಂಬೇಡ್ಕರ್ ಮಾತುಗಳನ್ನು ಪ್ರತಿಯೊಬ್ಬರು ಅರ್ಥಮಾಡಿಕೊಳ್ಳಬೇಕು. ಶಿಕ್ಷಣ ಮತ್ತು ಆರ್ಥಿಕ ಶಕ್ತಿಯಿಂದ ಅಸಮಾನತೆ ನಿವಾರಣೆಯಾಗಲಿದೆ ಎಂಬ ಉದ್ದೇಶದಿಂದ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ, ಜನರ ಕೈಯಲ್ಲಿ ಹಣದ ಹರಿವು ಹೆಚ್ಚಾಗುವಂತೆ ಮಾಡಿದೆ. ಎಲ್ಲಿಯವರೆಗೆ ಜಾತಿ ವ್ಯವಸ್ಥೆ ಜೀವಂತವಾಗಿರುತ್ತದೊ ಅಲ್ಲಿಯವರೆಗೂ ಜಾತಿ ಸಮ್ಮೇಳನ ನಡೆಯಬೇಕಾಗುತ್ತದೆ ಎಂದು ಲೋಹಿಯಾ ಅವರು ಹೇಳಿದ್ದರು."

"ಹಿಂದೆ ಸಂಸ್ಕೃತ ಕಲಿಯುವ, ಶಿಕ್ಷಣ ಪಡೆಯುವ ಇತರ ಸಮುದಾಯದವರಿಗೆ ಕಾದ ಸೀಸದ ಶಿಕ್ಷೆ ಇತ್ತು. ಆದರೆ ನಮಗೀಗ ಶಿಕ್ಷಣ ಸಿಕ್ಕಿದೆ. ನಮ್ಮ ಅನುಭವಗಳನ್ನು ದಾಖಲಿಸಬೇಕು. ನಮ್ಮ ಜ್ಞಾನ ಮತ್ತು ತಿಳಿವಳಿಕೆಗಳಲ್ಲಿ ಸ್ಪಷ್ಟತೆ ಇರಬೇಕು. ಕರ್ಮಸಿದ್ಧಾಂತವನ್ನು ಧಿಕ್ಕರಿಸಿ ವೈಜ್ಞಾನಿಕವಾಗಿ, ವೈಚಾರಿಕವಾಗಿ ಯೋಚಿಸಬೇಕು. ಆಗ ಮಾತ್ರ ಗುಲಾಮಗಿರಿಯಿಂದ ಹೊರಗೆ ಬರಬಹುದು. ಸತ್ಯ ಹೇಳುವ ದಿಟ್ಟತನ ಬೆಳೆಸಿಕೊಳ್ಳಬೇಕು. ಕಾಳಿದಾಸನ ನಾಲಿಗೆ ಮೇಲೆ ದೇವಿ ಅಕ್ಷರ ಬರೆದದ್ದಕ್ಕೆ ಅವನು ಮಹಾ ಕವಿಯಾದ ಎನ್ನುವ ಮಾತನ್ನೆಲ್ಲಾ ನಂಬಬೇಡಿ. ವಾಲ್ಮೀಕಿ ದರೋಡೆಕೋರ ಆಗಿದ್ದ ಅನ್ನುವುದನ್ನೆಲ್ಲಾ ನಂಬಬೇಡಿ. ಶೂದ್ರರು ವಿದ್ಯಾವಂತರಾಗಿ ಏನಾದರೂ ಮಹತ್ವವಾದದ್ದನ್ನು ಬರೆದರೆ ಅವರ ಬಗ್ಗೆ ಇಂಥಾ ಕತೆಗಳನ್ನು ಕಟ್ಟುತ್ತಾರೆ. ಅದ್ದರಿಂದ ನಾವು ಎಚ್ಚರವಾಗಿರಬೇಕು. ಬಸವಣ್ಣ 850 ವರ್ಷಗಳ ಹಿಂದೆಯೇ ಅನುಭವ ಮಂಟಪ ರಚಿಸಿ ಸಮ ಸಮಾಜದ ನಿರ್ಮಾಣಕ್ಕೆ ಮುನ್ನುಡಿ ಬರೆದಿದ್ದರು. ಪ್ರಗತಿಪರ ವಿಚಾರಗಳನ್ನು ಇಟ್ಟುಕೊಂಡವರಿಗೆ ನಿರಂತರವಾಗಿ ಸಮಸ್ಯೆ ಬರುತ್ತಲೇ ಇರುತ್ತವೆ. ಹೀಗಾಗಿ ಪ್ರಗತಿಪರ ವಿಚಾರಗಳ ಜೊತೆ ನೀವು ಸದಾ ಗಟ್ಟಿಯಾಗಿ ನಿಲ್ಲಬೇಕು. ಪ್ರಗತಿಪರ ವಿಚಾರಗಳ ಜೊತೆಗೆ ನಾವು ನಿಲ್ಲದೆ ಸಮ ಸಮಾಜ ಬರಬೇಕು ಎಂದರೆ ಸಾಧ್ಯವಿಲ್ಲ."

"ಜಾತಿಗೆ ಚಲನೆಯಿಲ್ಲ. ಜಾತಿವ್ಯವಸ್ಥೆ ನಿಂತ ನೀರು. ಇದಕ್ಕೆ ಚಲನೆ ಸಿಗಬೇಕಾದರೆ ಶಿಕ್ಷಣದ ಅಗತ್ಯವಿದೆ. ಜಾತಿಮುಕ್ತ ಸಮಾಜದ ನಿರ್ಮಾಣ ನಮ್ಮ ಸಂವಿಧಾನದ ಆಶಯ ಮತ್ತು ಬದ್ಧತೆ. ಆದರೆ ಇವತ್ತಿಗೂ ಅಸ್ಪೃಶ್ಯತೆ ಹೋಗಿಲ್ಲದಿರುವುದು, ಶೈಕ್ಷಣಿಕ ಸಮಾನತೆ ಇಲ್ಲದಿರುವುದು ಬೇಸರದ ಸಂಗತಿ.

"ಸಂವಿಧಾನವು ಇರದೇ ಹೋಗಿದ್ದರೆ ನಾವು, ನೀವು ಶಿಕ್ಷಣ ಪಡೆಯಲು ಸಾಧ್ಯವಿರಲಿಲ್ಲ. ಮನುಸ್ಮೃತಿಯ ಕಾರಣದಿಂದ ಜಾತಿ ಅಸಮಾನತೆ, ಜಾತಿ ಶೋಷಣೆ, ಜಾತಿ ದೌರ್ಜನ್ಯ ಹೆಚ್ಚಾಯಿತು. ಪಟ್ಟಭದ್ರರು ಹಿಂದಿನ ಜನ್ಮದ ಕರ್ಮ ಎಂದು ನಂಬಿಸಿ ಜನರನ್ನು ವಂಚಿಸಿ ದಾರಿ ತಪ್ಪಿಸುತ್ತಿದ್ದಾರೆ. ಅದಕ್ಕೇ ಬಸವಣ್ಣನವರು ಕರ್ಮ ಸಿದ್ಧಾಂತವನ್ನು ತಿರಸ್ಕರಿಸಿದರು."

"ಬ್ರಹ್ಮ ಒಬ್ಬರಿಗೆ ಶಿಕ್ಷಣ, ಮತ್ತೊಬ್ಬರಿಗೆ ಅನಕ್ಷರತೆ ಸಿಗಲಿ ಎಂದು ಬರೆದನಾ, ಒಬ್ಬನಿಗೆ ಬಡವನಾಗು, ಮತ್ತೊಬ್ಬನಿಗೆ ಶ್ರೀಮಂತನಾಗು ಎಂದು ಬ್ರಹ್ಮ ಬರೆದನಾ, ಒಬ್ಬ ಹೊಟ್ಟೆತುಂಬ ಉಣ್ಣಬೇಕು, ಉಳಿದವರು ಹಸಿವಿನಿಂದ ಬಿದ್ದಿರಬೇಕು ಎಂದು ಬ್ರಹ್ಮ ಬರೆದಿದ್ದಾನಾ? ಪಟ್ಟಭದ್ರರು ಬಸವಣ್ಣನವರ ಕ್ರಾಂತಿ ಮುಂದುವರಿಲು ಬಿಡಲಿಲ್ಲ. ಆದ್ದರಿಂದ ನಾವು ವೈಜ್ಞಾನಿಕವಾಗಿ, ವೈಚಾರಿಕವಾಗಿ ಚಿಂತಿಸುವುದು ಅಗತ್ಯ."

"ಅಹಿಂದ ಸಮಾಜ ಮತ್ತು ಎಲ್ಲಾ ಜಾತಿ, ಧರ್ಮಗಳ ಬಡತನ, ಹಸಿವು ನಿವಾರಣೆ ಆಗಬೇಕು. ಅನ್ನಕ್ಕಾಗಿ ಯಾರೂ ಇನ್ನೊಬ್ಬರ ಮನೆಯ ಬಾಗಿಲಿಗೆ ಹೋಗಿ ನಿಲ್ಲಬಾರದು ಎನ್ನುವ ಕಾರಣದಿಂದ ಅನ್ನಭಾಗ್ಯ ಯೋಜನೆ ಜಾರಿಗೆ ಬಂತು."

ಗೃಹ ಸಚಿವ ಡಾ. ಜಿ. ಪರಮೇಶ್ವರ್ ಮಾತನಾಡಿ ಹೀಗೆ ಹೇಳಿದರು: "ಕುರುಬ ಸಮುದಾಯದ ಇತಿಹಾಸ ಬಹಳ ದೊಡ್ಡದಿದೆ. ಕರ್ನಾಟಕ, ಆಂಧ್ರ, ತೆಲಂಗಾಣ, ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಈ ಸಮುದಾಯ ಸಕ್ರಿಯವಾಗಿದೆ. ಕುರುಬ ಸಮುದಾಯದ ಇಂತ ಜನಪರ, ಪ್ರಗತಿಪರ ಉತ್ತಮ ಅಲೋಚನೆಗಳಿಂದ ಇತರೆ ಸಮುದಾಯಗಳು ಪ್ರೇರಣೆ ಪಡೆಯಬಹುದಾಗಿದೆ. ಶಿಕ್ಷಣ, ಆರೋಗ್ಯ ವಲಯಕ್ಕೆ ಡಾ. ಎಂ.ಆರ್. ಹುಲಿನಾಯ್ಕರ್ ನೀಡಿದ ಕೊಡುಗೆ ಅಪಾರ. ಕಳೆದ 50 ವರ್ಷಗಳಲ್ಲಿ ಪಡೆದ ಅನುಭವ ಮತ್ತು ದೂರದೃಷ್ಟಿಯಿಂದಾಗಿ ಇಂದು ಶ್ರೀದೇವಿ ಶಿಕ್ಷಣ

### ಲೋಕಾರ್ಪಣೆಯಾದ 31 ಕೃತಿಗಳು

1. ಜನಪದ ಕಂಡ ಕುಲಗುರು ರೇವಣ್ಣಸಿದ್ದೇಶ್ವರ– ಪ್ರೊ. ಎಸ್.ಜಿ.ಸಿದ್ದರಾಮಯ್ಯ
2. ಕುರುಬರ ಕುಲದೈವಗಳು – ಚಂದ್ರಕಾಂತ ಬಿಜ್ಜರಗಿ
3. ಅಲೆಮಾರಿ ಕುರುಬರು – ಅಣ್ಣಪ್ಪ ಹೆಗಡೆ
4. ಕುರುಬ ಸಮಾಜ ಮತ್ತು ತಳ ಸಮುದಾಯ – ಡಾ.ಲಿಂಗದಹಳ್ಳಿ ಹಾಲಪ್ಪ
5. ಕುರುಬರ ಜಯಂತಿ – ಡಾ. ಲಿಂಗದಹಳ್ಳಿ ಹಾಲಪ್ಪ
6. ಗೊಂಡ ಸಂಸ್ಕೃತಿ – ಎಂ.ಜಿ.ಗಂಗನಪಳ್ಳಿ
7. ಕುರುಬ ಜನಾಂಗ: ವಿದೇಶಿ ವಿದ್ವಾಂಸರ ಅಧ್ಯಯನಗಳು – ಡಾ. ಚೆನ್ನಪ್ಪಕಟ್ಟಿ
8. ಕುರುಬರ ಬೆಡಗುಗಳು – ಡಾ.ವೈ.ಎಂ.ಯಾಕೊಳ್ಳಿ
9. ಹಾಲುಮತ ದಾಖಲು ಸಾಹಿತ್ಯ – ಪ್ರೊ.ಎಫ್.ಟಿ. ಹಳ್ಳಿಕೇರಿ
10. ಕುರುಬ ಜನಾಂಗ ಮತ್ತುಅನ್ಯಧರ್ಮ – ಪಂಥಗಳ ಪ್ರಭಾವ– ಡಾ ನೈಮೂರ್‌ರೆಹಮಾನ್
11. ಕುರುಬರ ಶಾಸನಗಳು – ಡಾ.ಡಿ. ಪುರುಷೋತ್ತಮ
12. ಕುರುಬ ಜನಾಂಗದ ಸಾಧಕಿಯರು – ಡಾ.ವಿಜಯಶ್ರೀ ಇಟ್ಟಣ್ಣವರ
13. ಕುರುಬರ ಆಚರಣೆಗಳು – ಚಿ.ಸಿ.ನಿಂಗಣ್ಣ
14. ಕುರುಬ ಜನಾಂಗ ಇತಿಹಾಸ – ವೆಂಕಟೇಶ ಕೆ.
15. ವಿಜಯನಗರ ಸಾಮ್ರಾಜ್ಯದ ಕುಲಪುರುಷ ಕುರುಬ – ಡಾ. ಲಿಂಗದಹಳ್ಳಿ ಹಾಲಪ್ಪ
16. ಕುರುಬ ಜನಾಂಗ ಸ್ವಾತಂತ್ರ್ಯ ಸೇನಾನಿಗಳು – ಹರ್ಷಿತ ಲಿಂಗದಳ್ಳಿ
17. ಕುರುಬರ ಸಾಮ್ರಾಜ್ಯಗಳು – ಹರ್ಷಿತ ಲಿಂಗದಳ್ಳಿ
18. ಕುರುಬರ ಜುಂಜೇಗೌಡ – ಡಾ. ಲಿಂಗದಹಳ್ಳಿ ಹಾಲಪ್ಪ
19. ಕರ್ನಾಟಕದ ಕುರುಬರ ಮಠಗಳು – ವೆಂಕಟೇಶ ಕೆ.
20. ಕುರುಬ ಸಾಹಿತಿಗಳು – ಡಾ. ಚಂದ್ರಕಲಾ ಬಿದರಿ
21. ಕುರುಬರ ಕುಲ ಕಸಬುಗಳು – ಭವ್ಯ ಆರ್.
22. ಕುರುಬ ಜನಾಂಗೀಯಪದಗಳ ಸಾಂಸ್ಕೃತಿಕ ಅನನ್ಯತೆ – ಡಾ. ಲಿಂಗದಹಳ್ಳಿ ಹಾಲಪ್ಪ
23. ಹಾಲುಮತ ಕಾವ್ಯಗಳು – ಡಾ. ಲಿಂಗದಹಳ್ಳಿ ಹಾಲಪ್ಪ
24. ಕುರುಬರ ಸಾಂಸ್ಕೃತಿಕ ನಾಯಕರು – ಡಾ. ಲಿಂಗದಹಳ್ಳಿ ಹಾಲಪ್ಪ
25. ಕುರುಬರ ಸಂಸ್ಕೃತಿ – ಮೌಖಿಕ ಆಕರಗಳು – ಡಾ. ಲಿಂಗದಹಳ್ಳಿ ಹಾಲಪ್ಪ
26. ಕುರುಬರ ಜನಪದ ಕಲೆಗಳು – ಡಾ. ಲಿಂಗದಹಳ್ಳಿ ಹಾಲಪ್ಪ
27. ಕುರುಬರ ಸಮುದಾಯ ಭಾಷೆ – ಡಾ. ಲಿಂಗದಹಳ್ಳಿ ಹಾಲಪ್ಪ
28. ಹಂಡೆ ಕುರುಬರ ಅರಸರು – ಡಾ. ಲಿಂಗದಹಳ್ಳಿ ಹಾಲಪ್ಪ
29. ಕುರುಬರಜಾತ್ರೆ – ಉತ್ಸವಗಳು – ಕೃಷ್ಣಬಾಯಿ ಹಾಗಲವಾಡಿ
30. ಕುರುಬ ಜನಾಂಗ: ದೇಸೀ ವಿದ್ವಾಂಸರ ಅಧ್ಯಯನಗಳು – ಡಾ. ಟಿ. ಲಕ್ಷ್ಮಿದೇವಿ
31. ಕುರುಬರ ಲಲಿತ ಕಲೆಗಳು – ಡಾ. ಎಂ. ಮಹೇಶ ಚಿಕ್ಕಲೂರು



**ಸಿದ್ದರಾಮಯ್ಯ**
ಮಾನ್ಯ ಮುಖ್ಯಮಂತ್ರಿಗಳು

"ಜಾತಿ ವ್ಯವಸ್ಥೆ ನಿಂತ ನೀರು. ಅದಕ್ಕೆ ಶಿಕ್ಷಣದ ಮೂಲಕ ಆರ್ಥಿಕ ಚೈತನ್ಯ ನೀಡಿದರೆ ಚಲನೆ ಪಡೆದುಕೊಳ್ಳುತ್ತದೆ. ಆಗ ಮಾತ್ರ ಜಾತಿಮುಕ್ತ, ಸಮ ಸಮಾಜದ ನಿರ್ಮಾಣ ಸಾಧ್ಯ. ಬಾವಿಯಲ್ಲಿ ನೀರು ಕಸಕಡ್ಡಿಗಳಿಂದ ಅಶುದ್ಧವಾಗಿರುತ್ತಿತ್ತು. ಅದನ್ನು ಸರಿಸಿ ನೀರು ಸೇದುತ್ತಿದ್ದೆವು. ಸಮಾಜದಲ್ಲೂ ಆಗಾಗ ಕಸಕಡ್ಡಿಗಳು ಸೇರಿಕೊಂಡು ಮಾಲಿನ್ಯವಾಗುತ್ತದೆ. ಅದನ್ನು ಆಗಾಗ ಸ್ವಚ್ಛಗೊಳಿಸಿಕೊಂಡು ಬದುಕಬೇಕು. ವೈಚಾರಿಕ ಚಿಂತನೆಗಳನ್ನು ಅಳವಡಿಸಿಕೊಂಡಾಗ ಹೊಸ ಸಮಾಜ ಕಟ್ಟಲು ಅನುಕೂಲವಾಗುತ್ತದೆ. ಎಲ್ಲಾ ಸಮುದಾಯ ತಮ್ಮ ಆಚಾರ–ವಿಚಾರಗಳ ಬಗ್ಗೆ ಕಾಲಕಾಲಕ್ಕೆ ಚಿಂತನೆಗಳನ್ನು ವಿಮರ್ಶೆ ಮಾಡಬೇಕು ಸಮಾಜಕ್ಕೆ ಉತ್ತಮ ಕೊಡುಗೆ ಕೊಡಬೇಕು. ಈ ಪ್ರಯತ್ನ ಕೇವಲ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಾಗಿರಬಾರದು.'



ಮುಖ್ಯಮಂತ್ರಿಗಳ ಜೊತೆ ಆಪ್ತ ಸಮಾಲೋಚನೆಯಲ್ಲಿ ಡಾ.ಎಂ.ಆರ್.ಹುಲಿನಾಯ್ಕರ್



**ಡಾ. ಜಿ. ಪರಮೇಶ್ವರ್**
**ಮಾನ್ಯ ಗೃಹ ಸಚಿವರು**

**“ರಾಜ್ಯದ ಅಭಿವೃದ್ಧಿಗೆ ಕುರುಬ ಸಮುದಾಯದ ಕೊಡುಗೆ ಬಹಳ ಮಹತ್ವದ್ದು. ಮುಖ್ಯಮಂತ್ರಿ ಸಿದ್ದರಾಮಯ್ಯ 16 ಬಜೆಟ್ ಮಂಡನೆ ಮಾಡಿರುವುದು ಮುಖ್ಯವಲ್ಲ. ಜಾತಿರಹಿತ ಸಮಾಜದ ನಿರ್ಮಾಣ ಮತ್ತು ಸಾಮಾಜಿಕ ನ್ಯಾಯದ ಬಗ್ಗೆ ಅವರಿಗೆ ಇರುವ ಪರಿಕಲ್ಪನೆ, ಆಳವಾದ ಚಿಂತನೆ ಇವು ಮುಖ್ಯ. ಸಾಮಾಜಿಕ, ಆರ್ಥಿಕಸಮೀಕ್ಷೆ ವರದಿ ಜಾರಿಗೊಳಿಸುವ ಬದ್ಧತೆಯ ನಿರ್ಧಾರದಿಂದ ಕರ್ನಾಟಕದ ರಾಜಕಾರಣ ಹೊಸ ದಿಕ್ಕು ಪಡೆಯುತ್ತಿದೆ. ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆ ಇಡೀ ದೇಶಕ್ಕೆ ಮಾದರಿಯಾಗಿದೆ. 1872 ಫ್ರೆಂಚ್ ಪಾದ್ರಿಯೊಬ್ಬರು ಕುರುಬ ಸಮುದಾಯದ ಕೊಡುಗೆಗಳನ್ನು ಪ್ರಸ್ತಾಪಮಾಡಿದ್ದಾರೆ ಎಂದರೆ ಸಮುದಾಯದ ಐತಿಹಾಸಿಕ ಮಹತ್ತ್ವ ಏನೆಂಬುದು ಅರ್ಥವಾಗಲಿದೆ.”**



**ಹೆಚ್. ಎಂ. ರೇವಣ್ಣ**
**ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷರು**

**“ಸಾಮಾಜಿಕ ಶೈಕ್ಷಣಿಕ ವರದಿಯನ್ನು ಸರಿಯಾಗಿ ಪರಾಮರ್ಶೆ ಮಾಡದೆ ಅರ್ಥಮಾಡಿಕೊಳ್ಳದೆ. ಹಾದಿ–ಬೀದಿಯಲ್ಲಿ ಅವೈಜ್ಞಾನಿಕ ಎಂದು ಹೇಳುತ್ತಿರುವುದು ಮೂರ್ಖತನ. ಹಿಂದುಳಿದ ಮತ್ತು ಶೋಷಿತ ಸಮುದಾಯಕ್ಕೆ ಸಿದ್ದರಾಮಯ್ಯ ಸರ್ಕಾರ ನೀಡಿದ ಕೊಡುಗೆ ಅಜರಾಮರ. 262 ಕೋಟಿ ವೆಚ್ಚದಲ್ಲಿ ಸಂಗೊಳ್ಳಿ ರಾಯಣ್ಣ ಸೈನಿಕ ಶಾಲೆ ನಿರ್ಮಿಸಿದ್ದಾರೆ ಸಾಮಾಜಿಕ ಆರ್ಥಿಕ ಸಮೀಕ್ಷೆ ಎಲ್ಲ ವರ್ಗ, ಸಮಾಜದ ಹಿತ ಕಾಪಾಡುವ ಆಶಾಕಿರಣವಾಗಿದೆ. ಸಾಮಾಜಿಕ ನ್ಯಾಯಕ್ಕೆ ಒತ್ತು ಕೊಡಬೇಕು ಎಂಬ ಕಾರಣಕ್ಕಾಗಿಯೇ ತಮಿಳುನಾಡು, ಜಾರ್ಖಂಡ್ ಸರ್ಕಾರಗಳು ಮೀಸಲಾತಿ ಪ್ರಮಾಣ ಹೆಚ್ಚಿಸಿವೆ.”**



**ಡಾ. ಎಂ.ಅರ್. ಹುಲಿನಾಯ್ಕರ್**
**ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು**

**“ಹಾವನೂರು ಹಿಂದುಳಿದ ಆಯೋಗದ ವರದಿ ಅನುಷ್ಠಾನ ಮಾಡಿದಾಗ ಅಂದಿನ ಮುಖ್ಯಮಂತ್ರಿ ಡಿ. ದೇವರಾಜ್ ಅರಸು ಮತ್ತು ಚಿನ್ನಪ್ಪ ರೆಡ್ಡಿ ಹಿಂದುಳಿದ ಆಯೋಗದ ಶಿಫಾರಸ್ಸು ಅನುಷ್ಠಾನ ಮಾಡಿದಾಗ ಎಂ. ವೀರಪ್ಪ ಮೊಯ್ಲಿ ಅನುಭವಿಸಿದ ಕಷ್ಟ, ರಾಜಕೀಯ ಪಲ್ಲಟಗಳ ಅರಿವಿದೆ. ಸಾಮಾಜಿಕ–ಆರ್ಥಿಕಸಮೀಕ್ಷೆಯ ವರದಿಯ ಜಾರಿಯಿಂದ ರಾಜ್ಯದಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಲಿದೆ. ಆಡಳಿತಗಾರರಿಗೆ ಮುಂದಿನ 50 ವರ್ಷದವರೆಗೆ ದಾರಿದೀಪ. ಬೆಳಕಿನ ಕನ್ನಡಿ. ಇದರ ಜಾರಿಗೆ ಸಂಕಲ್ಪ ತೊಟ್ಟಿರುವ ಮುಖ್ಯಮಂತ್ರಿ ಅವರಿಗೆ ಸಮಾಜದ ಎಲ್ಲ ವರ್ಗಗಳ ಬೆಂಬಲ, ಸಹಕಾರ ಸಿಗಬೇಕು. ಅಗತ್ಯ ಬಿದ್ದರೆ ನಾವು ಎಂತಹ ತ್ಯಾಗಕ್ಕೂ ಸಿದ್ದರಾಗಬೇಕು.”**

ಸಂಸ್ಥೆ ಬೃಹದಾಕಾರವಾಗಿ ಬೆಳೆದಿದೆ. ಎಸ್. ಎಂ ಕೃಷ್ಣ ಮುಖ್ಯಮಂತ್ರಿ ಆಗಿದ್ದ ಕಾಲಘಟ್ಟದಲ್ಲಿ ಡಾ. ಹುಲಿನಾಯ್ಕರ್ ಇಂಜಿನಿಯರ್ ಕಾಲೇಜು ಸ್ಥಾಪನೆಗಾಗಿ ನನ್ನ ಬಳಿ ಬಂದಿದ್ದರು. ಆಗ ಯಾವುದೇ ಅರ್ಜಿ ಸ್ವೀಕರಿಸದೇ ಕಾಲೇಜು ಮಂಜೂರು ಮಾಡಿದ್ದೆ.”

ಗ್ಯಾರಂಟಿ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ ಮಾತನಾಡಿ, “ಸಾಮಾಜಿಕ ಶೈಕ್ಷಣಿಕ ವರದಿಯನ್ನು ಸರಿಯಾಗಿ ಪರಾಮರ್ಶೆ ಮಾಡದೆ ಅರ್ಥಮಾಡಿಕೊಳ್ಳದೆ. ಹಾದಿ–ಬೀದಿಯಲ್ಲಿ ಅವೈಜ್ಞಾನಿಕ ಎಂದು ಹೇಳುತ್ತಿರುವುದು ಮೂರ್ಖತನ. ಹಿಂದುಳಿದ ಮತ್ತು ಶೋಷಿತ ಸಮುದಾಯಕ್ಕೆ ಸಿದ್ದರಾಮಯ್ಯ ಸರ್ಕಾರ ನೀಡಿದ ಕೊಡುಗೆಯನ್ನು ಯಾವ ಸರ್ಕಾರ ನೀಡಿಲ್ಲ” ಎಂದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ. ಡಾ. ಎಂ.ಆರ್. ಹುಲಿನಾಯ್ಕರ್ ಮಾತನಾಡಿ, “ಸಾಮಾಜಿಕ–ಆರ್ಥಿಕ ಸಮೀಕ್ಷಾ ವರದಿ ಜಾರಿಯಿಂದ ರಾಜ್ಯದಲ್ಲಿ ಕ್ರಾಂತಿಕಾರಕ ಬದಲಾವಣೆಯಾಗಲಿದೆ. ಆಡಳಿತಗಾರರಿಗೆ ಮುಂದಿನ 50 ವರ್ಷದವರೆಗೆ ದಾರಿದೀಪ. ಬೆಳಕಿನ ಕನ್ನಡಿ ಇದರ ಜಾರಿಗೆ ಸಂಕಲ್ಪ ತೊಟ್ಟಿರುವ ಮುಖ್ಯಮಂತ್ರಿ ಅವರಿಗೆ ಸಮಾಜದ ಎಲ್ಲ ವರ್ಗಗಳ ಬೆಂಬಲ. ಸಹಕಾರ ಸಿಗಬೇಕು. ಅಗತ್ಯಬಿದ್ದರೆ ಎಂತಹ ತ್ಯಾಗಕ್ಕೂ ಸಿದ್ದರಾಗಬೇಕು. ಶ್ರೀದೇವಿ ಸಂಸ್ಥೆ ಇಂಜಿನಿಯರಿಂಗ್ ಕಾಲೇಜು ತೆರೆಯಲು ಸಚಿವ ಡಾ. ಜಿ ಪರಮೇಶ್ವರ್ ಮಾಡಿದ ಉಪಕಾರವನ್ನು ನಾವು ಸ್ಮರಿಸಬೇಕು” ಎಂದರು.

**ಡಾ. ಹುಲಿನಾಯ್ಕರ್ ಅವರ ಮಾತಿನ ಸಾರಾಂಶ ಹೀಗಿದೆ:** “ತುಮಕೂರಿನಲ್ಲಿ ಕುರುಬರ ಸಮಾವೇಶ ನಡೆಯುತ್ತಿರುವುದು ಅರ್ಥಪೂರ್ಣವಾಗಿದೆ. ಈ ಸಮಾವೇಶದ ಮೂಲಕ ಸಮಾಜಕ್ಕೆ ಉತ್ತಮ ಸಂದೇಶ ಕೊಡಬೇಕಿದೆ. ಸಾಹಿತಿಗಳು ನಮ್ಮ ಕನ್ನಡದ ಆದಿಕವಿ ಪಂಪನಂತೆ ಹಾಗೂ ರಾಷ್ಟ್ರಕವಿ ಕುವೆಂಪು ಅವರಂತೆ ಸ್ವಾಭಿಮಾನಿಗಳಾಗಿರಬೇಕು. ತಾವು ಜನಿಸಿದ ಸಮುದಾಯದ ಬಗ್ಗೆ ಹೆಮ್ಮೆ ಮತ್ತು ಗೌರವ ಹೊಂದಿರಬೇಕು. ಅಂತಹ ಸಾಂಸ್ಕೃತಿಕ ವ್ಯಕ್ತಿಗಳಿಂದ ಯುವ ಜನಾಂಗ ಪ್ರೇರಣೆ ಪಡೆಯುವುದರಲ್ಲಿ ಯಾವುದೇ ಸಂಶಯವಿಲ್ಲ, ಇಂದಿನ ಸಮಾವೇಶಕ್ಕೆ ಹೆಚ್ಚಿನ ಜವಾಬ್ದಾರಿ ಇದೆ.”

“ಈ ವರದಿ ವೈಜಾನಿಕ ತತ್ವಗಳಿಂದ ಕೂಡಿದೆ, ಅದರ ಅನುಷ್ಠಾನದಿಂದ ಎಲ್ಲ ಸಮಾಜಕ್ಕೂ ಅನುಕೂಲವಾಗುತ್ತದೆ. ಸಮ ಸಮಾಜದ ನಿರ್ಮಾಣಕ್ಕೆ ಮುಖ್ಯಮಂತ್ರಿಗಳು ನಿರ್ಧಾರ ಮಾಡಿರುವುದು ಅವರ ಜೊತೆ ನಿಲ್ಲೋಣ.”

“ಶೋಷಿತ ವ್ಯಕ್ತಿಗಳ ಪರವಾಗಿ ಕೆಲಸ ಮಾಡುವವರಿಗೆ ಧೈರ್ಯ ಬೇಕು. ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೆಲಸ ಮಾಡುವವರು ಹಗಲುಗನಸು ಕಾಣಬಾರದು. ವಾಸ್ತವದ ನೆಲೆಯಲ್ಲಿ ಚಿಂತಿಸಬೇಕು. ಇಂದಿನ ಬದುಕು ಮುಖ್ಯ.”

ವೇದಿಕೆಯಲ್ಲಿ ಕಾಲೇಜಿನ ಮೆಡಿಕಲ್ ಡೈರೆಕ್ಟರ್ ಡಾ. ರಮಣ್ ಎಂ. ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕ ಎಂ.ಎಸ್. ಪಾಟೀಲ್, ಕೊಪ್ಪಳ ವಿಶ್ವವಿದ್ಯಾಲಯದ ಕುಲಪತಿ ಡಾ. ಬಿ.ಕೆ. ರವಿ, ಉಪಸ್ಥಿತರಿದ್ದರು.

ಎರಡು ದಿನಗಳ ಸಮಾವೇಶದಲ್ಲಿ ಸಾಹಿತ್ಯ, ರಾಜಕೀಯ, ಕೈಗಾರಿಕಾ ಆರ್ಥಿಕ ಕ್ಷೇತ್ರಕ್ಕೆ ಕುರುಬ ಸಮುದಾಯ ನೀಡಿದ ಕೊಡುಗೆ ಕುರಿತು ಚಿಂತನ–ಮಂಥನ, ಹಾಗೂ ಮುಂದೆ ಕೈಗೊಳ್ಳಬೇಕಾದ ಕಾರ್ಯ ಯೋಜನೆಗಳ ಬಗ್ಗೆಯೂ ಚರ್ಚೆ ನಡೆಸಲಾಯಿತು. ಬೇರೆ, ಬೇರೆ ಜಿಲ್ಲೆಗಳಿಂದ 300ಕ್ಕೂ ಹೆಚ್ಚು ಸಾಹಿತಿಗಳು, ಚಿಂತಕರು ಭಾಗಿಯಾಗಿದ್ದರು.

■ **ಚಿತ್ರಗಳು: ನವ್ಯಾ ಸ್ಟುಡಿಯೋ**

## ಅತ್ಯಂತ ಫಲಪ್ರದ: ಕಾ. ತ . ಚಿಕ್ಕಣ್ಣ



ಜನಸಾಮಾನ್ಯರಿಗೆ ಉಪಯೋಗವಾಗುವ ಮತ್ತು ಸಾಹಿತ್ಯ– ಮಾಹಿತಿ ನೀಡುವ ಮಹತ್ವದ ಕೃತಿಗಳನ್ನು ಪ್ರಕಟಿಸಿ ಮತ್ತು ಅದನ್ನು ಜನ ಸಮುದಾಯಕ್ಕೆ ತಲುಪಿಸುವ ನಿಟ್ಟಿನಲ್ಲಿ ಕುರುಬ ಸಾಂಸ್ಕೃತಿಕ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ಎರಡು ದಿನಗಳ ಕುರುಬರ ಸಂಸ್ಕೃತಿ ದರ್ಶನ ಜನಪ್ರಿಯ ಮಾಲಿಕೆಯ ಕೃತಿ ಲೋಕಾರ್ಪಣೆ ಮತ್ತು ಸಾಹಿತ್ಯ ಸಮಾವೇಶ– ಸಂವಾದ ಗೋಷ್ಠಿ ಯಶಸ್ವಿಯಾಗಿದೆ ಎಂದು ಸಂಘಟನೆಯ ಪ್ರಮುಖ ರೂವಾರಿ ಕಾ. ತ. ಚಿಕ್ಕಣ್ಣ ಸ್ಪಷ್ಟ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ 10 ಕೃತಿಗಳು ಪ್ರಕಟವಾಗಿತ್ತು. ಅದು ಧರ್ಮ, ಸಂಸ್ಕೃತಿ, ರಾಜಕೀಯ, ಶಿಕ್ಷಣ ಮುಂತಾದ ವಿಚಾರಗಳಿಗೆ ಸಂಬಂಧಪಟ್ಟಿದ್ದು ಆ ಕೃತಿಗಳು ಹೆಚ್ಚಾಗಿ ಅಧ್ಯಾಪಕರು ಸಂಶೋಧಕರಿಗೆ ಉಪಯೋಗವಾಗುತ್ತಿತ್ತು ಜನಸಾಮಾನ್ಯರಿಗೂ ತಲುಪುವಂತಹ, ಅಪರೂಪದ ಮಾಹಿತಿ, ವಿಚಾರಧಾರೆ ಕೃತಿಗಳ ಅಗತ್ಯ – ಬೇಡಿಕೆ ಹಿನ್ನಲೆಯಲ್ಲಿ 31 ಕೃತಿಗಳನ್ನು ಮುಖ್ಯಮಂತ್ರಿಯವರು ಲೋಕಾರ್ಪಣೆ ಮಾಡಿದ್ದಾರೆ.

ಬರೆದಿರುವ ವಿಷಯಗಳ ಬಗ್ಗೆ ಗೊಂದಲ – ಅನುಮಾನ ಇರಬಾರದು ಎಂಬ ಕಾರಣಕ್ಕಾಗಿ ಸಾಹಿತ್ಯ ಸಂವಾದ ಏರ್ಪಡಿಸಿದ್ದು ಸಾಹಿತಿ– ಚಿಂತಕರು, ವಿಮರ್ಶಕರು. ಸಾಹಿತ್ಯ ಆಸಕ್ತರು ಮುಕ್ತ ಮನಸ್ಸಿನಿಂದ ಸಂವಾದದಲ್ಲಿ ಪಾಲ್ಗೊಂಡು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ. ಒಟ್ಟಾರೆ ಈ ಸಮಾವೇಶ–ಸಂವಾದ ಅತ್ಯಂತ ಫಲಪ್ರದವಾಗಿದೆ.

## ‘ವಿಶ್ವ ಆಟಿಸಂ ಜಾಗೃತಿ’ ಅಭಿಯಾನ

## ತುಮಕೂರಿಗೆ ಬೇಕಿದೆ ‘ಆಟಿಸಂ ತರಬೇತಿ ಕೇಂದ್ರ’

ನರಮಂಡಲದ ಬೆಳವಣಿಗೆಯ ನ್ಯೂನತೆ, ಸಾಮಾಜಿಕ ನಡವಳಿಕೆ ಮತ್ತು ಸಂವಹನ ಕೊರತೆಗಳನ್ನು ನೀಗಿಸಲು ತುಮಕೂರಿನಲ್ಲಿ ಆಟಿಸಂ ತರಬೇತಿ ಕೇಂದ್ರದ ಸ್ಥಾಪನೆಯ ಅಗತ್ಯವಿದೆ ಎಂದು ಶ್ರೀ ಸಿದ್ದಗಂಗಾ ವೈದ್ಯಕೀಯ ಕಾಲೇಜಿನ ಮನೋವೈದ್ಯ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಜಿ.ಎಸ್. ಕೀರ್ತಿ ಸುಂದರ್ ಅವರು ಅಭಿಪ್ರಾಯಪಟ್ಟರು.

ತುಮಕೂರು ನಗರದ ಶಿರಾರಸ್ತೆಯ ಶ್ರೀದೇವಿ ನರ್ಸಿಂಗ್ ಕಾಲೇಜು ಹಾಗೂ ಶ್ರೀರಮಣಮಹರ್ಷಿ ನರ್ಸಿಂಗ್ ಕಾಲೇಜು, ಶ್ರೀದುರ್ಗಾಂಬಾ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನ ವತಿಯಿಂದ “ವಿಶ್ವ ಆಟಿಸಂ ಜಾಗೃತಿ” ಅಭಿಯಾನ ಕಾರ್ಯಕ್ರಮವನ್ನು ಏ.4 ರಂದು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಡಾ. ಜಿ.ಎಸ್. ಕೀರ್ತಿ ಸುಂದರ್ ಅವರು “ಭಾರತಕ್ಕೆ ಹೋಲಿಸಿದರೆ ಅಮೇರಿಕಾದಲ್ಲಿ ಈ ಸಮಸ್ಯೆ ಹೆಚ್ಚಾಗುತ್ತಿದೆ. ಇಂತಹ ಮಕ್ಕಳಲ್ಲಿನ ಕೊರತೆಯನ್ನು ನಿವಾರಿಸಲು ಅವರು ಸಮಾಜದ ಮುಖ್ಯವಾಹಿನಿಯಲ್ಲಿ ಎಲ್ಲರಂತೆ ಜೀವನ ನಡೆಸಲು ತರಬೇತಿ ಕೇಂದ್ರದ ಅಗತ್ಯ ಬಹಳವಾಗಿದೆ. ಸರ್ಕಾರ ಹಾಗೂ ಸ್ವಯಂ ಸೇವಾಸಂಸ್ಥೆಗಳು ಇದರ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗಿದೆ. ಇಂತಹ ಮಕ್ಕಳ ಸಮಸ್ಯೆಯನ್ನು ಗುರುತಿಸಿ ಅವರಿಗೆ ಪುನರ್ವಸತಿ ಕಲ್ಪಿಸುವಲ್ಲಿ ಅಂಗನವಾಡಿ ಮತ್ತು ಶಿಕ್ಷಕಿಯರ ಪಾತ್ರ ಬಹಳ ಮುಖ್ಯವಾಗಿದೆ. ಪೋಷಕರಿಗೆ ಗೊತ್ತಾಗದ ಸಮಸ್ಯೆಗಳನ್ನು ಶಿಕ್ಷಕರು ಪತ್ತೆಹಚ್ಚಿ ಸರಿಪಡಿಸಬೇಕಾಗಿದೆ. ವಿಶೇಷವಾಗಿ ತಂದೆ–ತಾಯಿಗಳು ಮಕ್ಕಳೊಂದಿಗೆ ಬೆರೆಯದಿರುವುದರಿಂದ ಈ ಸಮಸ್ಯೆ ಹೆಚ್ಚಾಗಿದೆ. 1980ರ ನಂತರ ಭಾರತದಲ್ಲಿ ನ್ಯೂಕ್ಲಿಯರ್ ಕುಟುಂಬಗಳ ಸಂಖ್ಯೆ ಹೆಚ್ಚಾಗಿ ಅಜ್ಜಿ, ತಾತ, ದೊಡ್ಡಪ್ಪ, ಚಿಕ್ಕಪ್ಪ, ಚಿಕ್ಕಮ್ಮ ಮುಂತಾದ ಸಂಬಂಧಗಳು ಕಡಿಮೆಯಾಗುತ್ತಿರುವಾಗಲೇ ಮಕ್ಕಳಲ್ಲಿ ಈ ರೀತಿಯ ಸಮಸ್ಯೆ ಹೆಚ್ಚಾಗುತ್ತಿದೆ. ಇದಕ್ಕೆ ನಿರ್ದಿಷ್ಟ ಕಾರಣಗಳನ್ನು ಹುಡುಕಲಾಗದು” ಎಂದ ಅವರು ಇಂತಹ ಮಕ್ಕಳನ್ನು ಹೇಗೆ ನೋಡಿಕೊಳ್ಳಬೇಕು. ಇದರ ಗುಣಲಕ್ಷಣಗಳು ಹೇಗಿರುತ್ತವೆ ಎಂಬುದನ್ನು ಅವರು ಎಳೆ–ಎಳೆಯಾಗಿ ಬಿಡಿಸಿ ಸಭೆಗೆ ಪರಿಚಯ ಮಾಡಿಕೊಟ್ಟರು.

ನರಮಂಡಲದ ಬೆಳವಣಿಗೆಯ ನ್ಯೂನತೆ, ಸಾಮಾಜಿಕ ನಡವಳಿಕೆ ಮತ್ತು ಸಂವಹನ ಕೊರತೆ, ತೊಂದರೆಯನ್ನು ಆಟಿಸಂ ಎಂದು ಕರೆಯಲಾಗುತ್ತಿದೆ. ಇದು ಸಾವಿರ ಜನರ ಪೈಕಿ ಒಬ್ಬರು ಅಥವಾ ಇಬ್ಬರಲ್ಲಿ ಕಾಣಿಸಿಕೊಳ್ಳಲಿದೆ.

ಇದೇ ಸಂದರ್ಭದಲ್ಲಿ ನರ್ಸಿಂಗ್ ವಿದ್ಯಾರ್ಥಿಗಳಿಗೆ ಭಿತ್ತಿಪತ್ರ ಸ್ಪರ್ಧೆಯನ್ನು ಏರ್ಪಡಿಸಿ, ವಿಜೇತರಾದವರಿಗೆ ಪ್ರಮಾಣಪತ್ರ ಮತ್ತು ಬಹುಮಾನಗಳನ್ನು ವಿತರಿಸಲಾಯಿತು.

ಇದೇ ಸಂದರ್ಭದಲ್ಲಿ ಶ್ರೀ ಸಿದ್ದಗಂಗಾ ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಜಿ.ಎಸ್. ಕೀರ್ತಿ ಸುಂದರ್ ಅವರನ್ನು ಹಾಗೂ ಶ್ರೀ ಸಿದ್ದಗಂಗಾ ಮೆಡಿಕಲ್ ಕಾಲೇಜಿನ ಮನೋವೈದ್ಯರಾದ ಡಾ. ಕೆ. ಯಶವಂತ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.



# ವಿಶ್ವ ಕ್ಷಯ ರೋಗ ನಿರ್ಮೂಲನಾ ದಿನದ ಅಂಗವಾಗಿ ಕಾಲ್ನಡಿಗೆ ಜಾಥಾ

ಕೋವಿಡ್ ನಂತರ ಜಗತ್ತಿನಾದ್ಯಂತ ಸೋಂಕು ರೋಗಗಳು ಹೆಚ್ಚಾಗುತ್ತಿದ್ದು, ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕಾಗಿದೆ ಎಂದು ತುಮಕೂರಿನ ಶಾಸಕ ಜಿ.ಬಿ. ಜ್ಯೋತಿಗಣೇಶ್ ಅವರು ಅಭಿಪ್ರಾಯಪಟ್ಟರು.

ತುಮಕೂರಿನ ಅಮರಜ್ಯೋತಿ ನಗರದ ಶ್ರೀದೇವಿ ನಗರ ಆರೋಗ್ಯ ತರಬೇತಿ ಕೇಂದ್ರದ ವತಿಯಿಂದ ಮಾರ್ಚ್ 24 ರಂದು ಸೋಮವಾರ ಬೆಳಿಗ್ಗೆ 10 ಗಂಟೆಗೆ "ಶ್ರೀದೇವಿ ನಗರ ಆರೋಗ್ಯ ತರಬೇತಿ ಕೇಂದ್ರದಿಂದ ಕುರಿಪಾಳ್ಯದವರೆಗೆ" ಜಾಗೃತಿ ಜಾಥಾವನ್ನು ಸಮುದಾಯ ವೈದ್ಯಶಾಸ್ತ್ರ ವಿಭಾಗದ ಸಂಯುಕ್ತಾಶ್ರಯದಲ್ಲಿ "ವಿಶ್ವ ಕ್ಷಯ ರೋಗ ನಿರ್ಮೂಲನಾ ದಿನಾಚರಣೆಯ" ಹಮ್ಮಿಕೊಳ್ಳಲಾಗಿತ್ತು. ವಿಶ್ವ ಕ್ಷಯ ರೋಗದ–2025 ಧ್ಯೇಯವಾಕ್ಯ "ಹೌದು, ನಾವು ಟಿ.ಬಿ.ಯನ್ನು ಕೊನೆಗೊಳಿಸಬಹುದು, ಕಮಿಟ್, ಇನ್ವೆಸ್ಟ್, ಡೆಲಿವರ್" (Yes! We Can End TB: Commit, Invest, Deliver) ಆಗಿತ್ತು.

ಶಾಸಕ ಜಿ.ಬಿ. ಜ್ಯೋತಿಗಣೇಶ್ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡುತ್ತಾ 'ಸಕಾಲದಲ್ಲಿ ಸೂಕ್ತ ಚಿಕಿತ್ಸೆ ಪಡೆದರೆ ಕ್ಷಯ ರೋಗದಿಂದ ಸುಲಭವಾಗಿ ಪಾರಾಗಬಹುದು ಆದರೆ ಹಗುರವಾಗಿ ತೆಗೆದುಕೊಂಡರೆ ಪ್ರಾಣಕ್ಕೇ ಸಂಚಕಾರ ತರುತ್ತದೆ. ಕೋವಿಡ್ ನಂತರ ಹೊಸ ವೈರಾಣುಗಳು ಪತ್ತೆಯಾಗುತ್ತಿವೆ. ಜೊತೆಗೆ, ಬ್ಯಾಕ್ಟೀರಿಯಾದಿಂದ ಉಂಟಾಗುವ ಕ್ಷಯ ರೋಗವು ಹೆಚ್ಚು ಸುದ್ದಿಯಾಗದಿದ್ದರೂ, ಬಹಳಷ್ಟು ಜನರನ್ನು ಬಾಧಿಸುತ್ತಿದೆ' ಎಂದರು.



ಶಾಸಕ ಜಿ.ಬಿ.ಜ್ಯೋತಿಗಣೇಶ್, ಶ್ರೀದೇವಿ ಆಸ್ಪತ್ರೆಯ ಮಾನವ ಸಂಪನ್ಮೂಲ ವಿಭಾಗ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಟ್ರಸ್ಟಿಯಾದ ಅಂಬಿಕಾ ಎಂ ಹುಲಿನಾಯ್ಕರ್, ಶ್ರೀದೇವಿ ಸಮುದಾಯ ವೈದ್ಯಕೀಯ ವಿಭಾಗದ ಮುಖ್ಯಸ್ಥರಾದ ಡಾ.ಪಿ.ಎಂ.ರವೀಶ್, ಆಡಳಿತಾಧಿಕಾರಿ ಟಿ.ವಿ. ಬ್ರಹ್ಮದೇವಯ್ಯ, ಸಿ.ಎ.ಒ. ಡಾ.ಪ್ರದೀಪ್‌ಕುಮಾರ್ ಪೆಗ್ಗಿ, ಪ್ರಾಂಶುಪಾಲರಾದ ಪ್ರೊ.ಆರ್.ಕೆ.ಮುನಿಸ್ವಾಮಿ, ಪ್ರೊ.ಎಸ್.ಉಷಾ, ಪ್ರೊ.ಅಂಬಾ, ಬೋಧಕ–ಬೋಧಕೇತರ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ಆಸ್ಪತ್ರೆಯ ಮಾನವ ಸಂಪನ್ಮೂಲ ವಿಭಾಗ ನಿರ್ದೇಶಕರಾದ ಎಂ.ಎಸ್. ಪಾಟೀಲ್ ಅವರು ಮಾತನಾಡುತ್ತಾ 'ಕ್ಷಯ ಸೋಂಕಿತರನ್ನು ಪ್ರತ್ಯೇಕವಾಗಿರಿಸಿ ಚಿಕಿತ್ಸೆ ನೀಡುವುದರಿಂದ ಗುಣಮುಖಗೊಳಿಸಲು ಸಾಧ್ಯವಾಗುತ್ತದೆ. ಆದರೆ, ಸಮಾಜದಲ್ಲಿ ಇದರ ಬಗ್ಗೆ ಅರಿವು ಹೆಚ್ಚುವುದು ಅತ್ಯಗತ್ಯ' ಎಂದು ಅಭಿಪ್ರಾಯಪಟ್ಟರು.

ಶ್ರೀದೇವಿ ಸಮುದಾಯ ವೈದ್ಯಕೀಯ ವಿಭಾಗದ ಮುಖ್ಯಸ್ಥರಾದ ಡಾ. ಪಿ.ಎಂ. ರವೀಶ್ ಅವರು ಮಾತನಾಡುತ್ತಾ 'ಟಿ.ಬಿ.ಯಲ್ಲಿ ಔಷಧ ನಿರೋಧಕ ಕ್ಷಯರೋಗ (ಡ್ರಗ್ ರೆಸಿಸ್ಟೆಂಟ್ ಟ್ಯೂಬರ್ ಕ್ಯೂಲೋಸಿಸ್) ಎಂಬ ವಿಧದ ಕ್ಷಯಕ್ಕೆ ಸ್ವಲ್ಪ ದೀರ್ಘಾವಧಿಗೆ ಚಿಕಿತ್ಸೆ ನೀಡಬೇಕಾಗುತ್ತದೆ. ಜೊತೆಗೆ, ಸಮುದಾಯದಲ್ಲಿ ಇದರ ಬಗ್ಗೆ ತಿಳುವಳಿಕೆ ಹೆಚ್ಚಾಗುವ ಅಗತ್ಯವಿದೆ' ಎಂದರು.

▪ ವರದಿ: ಎಸ್. ಆನಂದ

# ಕ್ಷಯ ರೋಗ ನಿಯಂತ್ರಣ

## ತುಮಕೂರು ಜಿಲ್ಲೆಗೆ ಪ್ರಧಾನಮಂತ್ರಿಗಳ ಬೆಳ್ಳಿ ಪದಕ

ಕ್ಷಯಮುಕ್ತ ಭಾರತ ನಿರ್ಮಾಣದಲ್ಲಿ ಸರ್ಕಾರ ಮತ್ತು ಆರೋಗ್ಯ ಸಮುದಾಯ ಸಂಘಟಿತ ಪ್ರಯತ್ನವನ್ನು ಮತ್ತಷ್ಟು ಚುರುಕುಗೊಳಿಸಬೇಕಿದೆ. ಇದಕ್ಕೆ ಕಾರಣ ಎಂದರೆ ವಿಶ್ವ ಟಿಬಿ ರೋಗಿಗಳ ಪ್ರಮಾಣದಲ್ಲಿ ಭಾರತ ಶೇಕಡ 30 ರಷ್ಟು ಪಾಲು ಹೊಂದಿದೆ ಎಂದು ವಿಶ್ವಸಂಸ್ಥೆಯ ತಾಂತ್ರಿಕ ಸಲಹೆಗಾರ್ತಿ ಡಾ. ಶಾಜಿಯಾ ಅಂಜುಮ್ ಅಭಿಪ್ರಾಯ ಪಟ್ಟಿದ್ದಾರೆ.




ತುಮಕೂರಿನ ಶ್ರೀದೇವಿ ಕಾಲೇಜಿನಲ್ಲಿ 03–04–2025ರಂದು ನಡೆದ ಕ್ಷಯಮುಕ್ತ ಭಾರತ ನಿರ್ಮಾಣದಲ್ಲಿ ಅನುಸರಿಸಬೇಕಾದ ತಕ್ಷಣದ ಕಾರ್ಯತಂತ್ರವನ್ನು ಕುರಿತ ಕಾರ್ಯಾಗಾರದಲ್ಲಿ ಈ ವಿಷಯವನ್ನು ತಿಳಿಸಿದ್ದಾರೆ. ಹೀಗಾಗಿ ಇದನ್ನು ಕೊನೆಗಾಣಿಸಲು ಸರ್ಕಾರದ ಜೊತೆ ಸ್ವಯಂಸೇವಾ ಸಂಸ್ಥೆಗಳು ಕೈಜೋಡಿಸಬೇಕಿದೆ. ಆರಂಭಿಕ ಹಂತದಲ್ಲಿಯೇ ರೋಗವನ್ನು ಪತ್ತೆ ಹಚ್ಚಿ, ಅದಕ್ಕೆ ಸೂಕ್ತ ಚಿಕಿತ್ಸೆ ನೀಡಿ ಕೌಟುಂಬಿಕ ಮಟ್ಟದಲ್ಲಿ ಹೆಚ್ಚು ಆಪ್ತಸಮಾಲೋಚನೆ ನಡೆಸಿದರೆ ಗುರಿ ಮುಟ್ಟಬಹುದಾಗಿದೆ.

ಟಿಬಿ ರೋಗವು ಬ್ಯಾಕ್ಟೀರಿಯಾದ ಸೋಂಕಿನ ಕಾರಣದಿಂದಾಗಿದ್ದು, ದೈಹಿಕ, ಸಾಮಾಜಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರಲಿದೆ. ಏಷ್ಯಾ ಮತ್ತು ಆಫ್ರಿಕಾದ ದೇಶಗಳಲ್ಲಿ ಇದು ಹೆಚ್ಚು ಸಕ್ರಿಯವಾಗಿದೆ. ಜಾಗತಿಕ ಮಟ್ಟದಲ್ಲಿ 2030ರ ವೇಳೆಗೆ ಈ ಸಾಂಕ್ರಾಮಿಕ ರೋಗವನ್ನು ಕೊನೆಗೊಳಿಸುವ ಗುರಿಯನ್ನು ಹೊಂದಲಾಗಿದೆ. ಇದೇ ವರ್ಷ ಕ್ಷಯಮುಕ್ತ ಭಾರತಕ್ಕೆ ಸರ್ಕಾರ ಸಂಕಲ್ಪ ಮಾಡಿದೆ.

ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ ದೇಶದಲ್ಲಿ 28 ಲಕ್ಷ ಕ್ಷಯರೋಗಿಗಳಿದ್ದಾರೆ. ವಿಶ್ವಮಟ್ಟಕ್ಕೆ ಹೋಲಿಸಿದರೆ ಇದರ ಪ್ರಮಾಣ ಶೇಕಡ 30ರಷ್ಟಿದೆ. ಅದೇ ರೀತಿ ಕರ್ನಾಟಕದಲ್ಲಿ 79 ಸಾವಿರ ರೋಗಿಗಳಿದ್ದಾರೆ. ಇದರ ನಡುವೆಯೂ ಒಂದು ಸಮಾಧಾನಕರ ಸಂಗತಿ ಎಂದರೆ ಕ್ಷಯರೋಗ ನಿಯಂತ್ರಣಕ್ಕಾಗಿ ಕರ್ನಾಟಕಕ್ಕೆ ಮತ್ತು ತುಮಕೂರುಜಿಲ್ಲೆಗೆ ಪ್ರಧಾನ ಮಂತ್ರಿಗಳ ಬೆಳ್ಳಿ ಪದಕ ಲಭಿಸಿದೆ. ಕ್ಷಯರೋಗದ ಬಗ್ಗೆ ಅನಗತ್ಯ ಗಾಬರಿ, ಆತಂಕ ಪಡಬೇಕಾಗಿಲ್ಲ, ವೈದ್ಯರ ಸಲಹೆ ಮೇರೆಗೆ ತಪ್ಪದೇ ಆರು ತಿಂಗಳು ಔಷಧೋಪಚಾರ ಮಾಡಿಕೊಂಡರೆ ಸಂಪೂರ್ಣ ಗುಣಮುಖರಾಗಿ ಸಾಮಾನ್ಯ ಜೀವನ ನಡೆಸಬಹುದು. ಬಹು ಔಷಧ ಪ್ರತಿರೋಧ ರೋಗಿಗಳಿಗೆ ಅದೇ ರೀತಿ BPaLM (Bedaquiline, Pretomanid, Linezolid, and Moxifloxacin) ಎಂಬ ಹೊಸ ಟಿಬಿ ಔಷಧವನ್ನು ಮುತುವರ್ಜಿಯಿಂದ ಒಂಬತ್ತು ತಿಂಗಳವರೆಗೂ ವೈದ್ಯರ ಸತತ ಮೇಲ್ವಿಚಾರಣೆಯಲ್ಲಿ 9 ತಿಂಗಳ ಚಿಕಿತ್ಸೆ ಅಗತ್ಯವಿದೆ.

ಕ್ಷಯ ರೋಗಿಗಳ ಚೇತರಿಕೆ ಮತ್ತು ಅನುಕೂಲಕ್ಕಾಗಿ "ನಿಕ್ಷಯ್ ಮಿತ್ರ" ಎಂಬ ದತ್ತು ಯೋಜನೆ ಆರಂಭಿಸಲಾಗಿದ್ದು ಯಾರು ಬೇಕಾದರೂ ಕ್ಷಯರೋಗಿಗಳಿಗೆ ದವಸ, ಧಾನ್ಯ, ಹಣ್ಣು, ತರಕಾರಿ, ಔಷಧ, ಹಾಗೂ ಇನ್ನಿತರೆ ವಸ್ತುಗಳನ್ನು ದೇಣಿಗೆಯಾಗಿ ನೀಡಬಹುದು. ಸ್ವಯಂಸೇವಾ ಸಂಸ್ಥೆಗಳು ಇಂತಹವರಿಗೆ ನೆರವಿನ ಹಸ್ತ ಚಾಚಬಹುದು.

'ನಿಕ್ಷಯ್ ಮಿತ್ರ' ದತ್ತು ಯೋಜನೆಯನ್ನು ಸೆಪ್ಟೆಂಬರ್ 9, 2022ರಂದು ಪ್ರಾರಂಭಿಸಲಾಯಿತು. ನಿಕ್ಷಯ್ ಮಿತ್ರರು, ವ್ಯಕ್ತಿಗಳು, ಎನ್‌ಜಿಒಗಳು, ಸಹಕಾರಿ ಸಂಘಗಳು, ನಿಗಮ–ಮಂಡಳಿಗಳು ಹಾಗೂ ರಾಜಕೀಯ ಪಕ್ಷಗಳು ಕನಿಷ್ಠ 6 ತಿಂಗಳಿನಿಂದ ಗರಿಷ್ಠ 3 ವರ್ಷಗಳವರೆಗೆ ಕ್ಷಯರೋಗಿಗಳನ್ನು ದತ್ತು ಪಡೆದು ಅವರಿಗೆ ಪೌಷ್ಟಿಕ ಆಹಾರ ನೀಡಬಹುದು.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು 'ನಿಕ್ಷಯ್ ಮಿತ್ರ ಯೋಜನೆ' ಕ್ಷಯರೋಗದ ವಿರುದ್ಧದ ಹೋರಾಟದಲ್ಲಿ ದೇಶದ ಪ್ರಬಲವಾದ ಅಸ್ತ್ರವಾಗಿದೆ. ನಮ್ಮಲ್ಲಿ 2025ರ ವೇಳೆಗೆ 'ಕ್ಷಯಮುಕ್ತ ಭಾರತ'ದ ಸಂಕಲ್ಪವನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ.

'ನಿಕ್ಷಯ್ ಮಿತ್ರ'ರಾಗ ಬಯಸುವವರು ನಿಕ್ಷಯ್ ಪೋರ್ಟಲ್‌ನಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಸಹಾಯಕ್ಕಾಗಿ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಅಥವಾ ಹಾಗೂ ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿಯನ್ನು ಸಂಪರ್ಕಿಸಬಹುದು.

ಇದಲ್ಲದೇ 'ನಿಕ್ಷಯ್ ಪೋಷಣ್' ಯೋಜನೆಯಡಿ ಕೇಂದ್ರ ಸರ್ಕಾರ ರೋಗಿಗಳಿಗೆ ತಿಂಗಳಿಗೆ ಒಂದು ಸಾವಿರ ರೂಗಳನ್ನು ಅವರ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗುತ್ತದೆ.

ಈ ಕಾಯಿಲೆ ಬಗ್ಗೆ ಸಮಾಜದಲ್ಲಿ ತಪ್ಪು ಕಲ್ಪನೆಯಿದೆ. ರೋಗಿ ಮತ್ತು ಅವರ ಕುಟುಂಬದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಇದನ್ನು ತೊಡೆಯುವ ನಿಟ್ಟಿನಲ್ಲಿ 'ನಿಕ್ಷಯ್ ಮಿತ್ರ' ಹಾಗೂ 'ನಿಕ್ಷಯ್ ಪೋಷಣ್' ಯೋಜನೆ ಮಹತ್ವ, ಪರಿಣಾಮಕಾರಿ ಬೆಳವಣಿಗೆಯಾಗಿದೆ.

ಬೆಂಗಳೂರಿನ ಎನ್.ಟಿ.ಐ ಮಾಜಿ ನಿರ್ದೇಶಕ ಹಾಗೂ ಟಿ.ಬಿ. ಸಲಹೆಗಾರ ಡಾ. ಎನ್. ಸೋಮಶೇಖರ್ ಮಾತನಾಡಿ, ಭಾರತವನ್ನು ಕ್ಷಯಮುಕ್ತ ಮಾಡುವ ನಿಟ್ಟಿನಲ್ಲಿ ಗಣನೀಯ ಪ್ರಗತಿ ಸಾಧಿಸಲಾಗಿದೆ.

ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಶೇಕಡ 18ರಷ್ಟು ಕಡಿಮೆಯಾಗಿದೆ. ಆದರೂ ಈ ನಿಟ್ಟಿನಲ್ಲಿ ಸಮುದಾಯವನ್ನು ಜಾಗೃತಿಗೊಳಿಸುವ ಕೆಲಸ ಆಗಬೇಕಿದೆ ಎಂದು ಒತ್ತಿ ಹೇಳಿದರು. ಆರಂಭಿಕ ಹಂತದಲ್ಲಿ ರೋಗಿಗಳನ್ನು ಗುರುತಿಸಿ ಚಿಕಿತ್ಸೆ ನೀಡಲು ಕಾರ್ಯಕ್ರಮ ರೂಪಿಸಬೇಕಾಗಿದೆ.

▪ ಕೆ.ಎಸ್. ರಾಜಮನ್ನಾರ್

## ಡಾ. ಶಿವಕುಮಾರಸ್ವಾಮೀಜಿ ಅವರ 118ನೆಯ ಜನ್ಮದಿನೋತ್ಸವದ ಆಚರಣೆ

"ನಡೆದಾಡುವ ದೇವರೆಂದು ಖ್ಯಾತರಾಗಿದ್ದ ಡಾ. ಶಿವಕುಮಾರಸ್ವಾಮೀಜಿಯವರು ಬಡವ, ಬಲ್ಲಿದ, ಜಾತಿ, ಯಾವುದನ್ನೂ ನೋಡದೆ ಎಲ್ಲಾ ಮಕ್ಕಳಿಗೆ ಅನ್ನದಾನ, ವಸತಿಕೊಟ್ಟು ಎಲ್ಲರೂ ಒಂದೇ ಎಂದು ಪೋಷಿಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ಅತಿಹೆಚ್ಚು ಗಮನವನ್ನು ಕೊಟ್ಟು ಅವರ ಉನ್ನತ ಸ್ಥಾನಕ್ಕೆ ಏರುವಂತೆ ಮಾಡಿದ್ದರು. ಕಾಯಕವೇ ಕೈಲಾಸ ಎನ್ನುವ ತತ್ತ್ವವನ್ನು ಸಂಪೂರ್ಣವಾಗಿ ಪಾಲಿಸಿ ಶ್ರೀಗಳು ಎಲ್ಲರ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದರು.



ಸಿದ್ಧಗಂಗಾ ಮಠದಲ್ಲಿ ಓದಿದ ವಿದ್ಯಾರ್ಥಿಗಳು ಇಂದು ಸರ್ಕಾರಿ, ಖಾಸಗಿ ಕಂಪನಿಗಳಲ್ಲಿ ಹಾಗೂ ದೇಶ ವಿದೇಶಗಳಲ್ಲಿ ಅತ್ಯುನ್ನತ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಶ್ರೀಗಳು ಅಂಧರಿಗೂ ಶಾಲೆಯನ್ನು ತೆರೆದು ನಿರಂತರವಾಗಿ ವಿದ್ಯಾದಾನವನ್ನು ಮಾಡುವ ವ್ಯವಸ್ಥೆಯನ್ನು ಮಾಡಿದ್ದಾರೆ" ಎಂದು ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಆರ್. ಹುಲಿನಾಯ್ಕರ್‌ರವರು ತಿಳಿಸಿದರು.

ತುಮಕೂರು ನಗರದ ಶ್ರೀದೇವಿ ಶಿಕ್ಷಣ ವಿದ್ಯಾಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಡಾ. ಶಿವಕುಮಾರ ಸ್ವಾಮೀಜಿಯವರ 118ನೆಯ ಜನ್ಮದಿನೋತ್ಸವದ ಕಾರ್ಯಕ್ರಮವನ್ನು ಏಪ್ರಿಲ್ ಒಂದರಂದು ಹಮ್ಮಿಕೊಳ್ಳಲಾಗಿತ್ತು.

ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ಮತ್ತು ಮಾಹಿತಿ ತಂತ್ರಜ್ಞಾನ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು "ಪರಮಪೂಜ್ಯ ಡಾ.ಶಿವಕುಮಾರಸ್ವಾಮಿಗಳು ಸಮಾಜದ ಕೆಳಸ್ತರಗಳಿಂದ ಬಂದ ಅಶಕ್ತರು, ದೀನರು, ದುರ್ಬಲರಿಗೆ ತ್ರಿವಿಧದಾಸೋಹಗಳಾದ ಅನ್ನ, ಆಶ್ರಯ ಮತ್ತು ವಿದ್ಯೆಯನ್ನು ನೀಡಿ ಅವರಲ್ಲಿ ಆತ್ಮವಿಶ್ವಾಸ ತುಂಬುವ ಕಾರ್ಯವನ್ನು ನಿರಂತರವಾಗಿ ಮಾಡಿದ್ದಾರೆ, ಡಾ. ಶಿವಕುಮಾರಸ್ವಾಮಿಗಳು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಮಹತ್ತರ ಕಾರ್ಯಗಳಿಂದ ಸಶಕ್ತ ರಾಷ್ಟ್ರನಿರ್ಮಾಣಕ್ಕೆ ಅಗಣಿತ ಸೇವೆ ಸಲ್ಲಿಸಿದ್ದಾರೆ" ಎಂದು ತಿಳಿಸಿದರು.

ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ. ಲಾವಣ್ಯ ರಮಣ ಅವರು ಮಾತನಾಡುತ್ತಾ "ಶ್ರೀಸಿದ್ಧಗಂಗಾ ಮಠದಲ್ಲಿ ಪ್ರತಿನಿತ್ಯ ಸಾವಿರಾರು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಿಗೆ ಅನ್ನದಾಸೋಹ ನಡೆಸುತ್ತಿರುವುದು ನಿಜಕ್ಕೂ ಶ್ಲಾಘನೀಯವಾಗಿದೆ" ಎಂದು ವಿವರಿಸಿದರು.






ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಏಪ್ರಿಲ್ 12 ರಂದು ನಡೆದ 6ನೇ ವರ್ಷದ ಪದವಿ ಪ್ರಧಾನ ಸಮಾರಂಭದಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ.

# ಗ್ರಾಮೀಣ ಆರೋಗ್ಯ ಸುಧಾರಿಸಿದರೆ ಭಾರತದಲ್ಲಿ ಮತ್ತೆ ಸುವರ್ಣಯುಗ

'ಆರೋಗ್ಯವೇ ಭಾಗ್ಯ ಎಂಬುದು ಗಾದೆಯ ಮಾತು ಇದು ನಿತ್ಯಸತ್ಯವೂ ಹೌದು. ಈ ನಿಟ್ಟಿನಲ್ಲಿ ಸೌಲಭ್ಯ ವಂಚಿತ ಗ್ರಾಮೀಣ ಜನರಿಗೆ ಉತ್ತಮ ಆರೋಗ್ಯಸೇವೆ ಲಭ್ಯವಾಗಿ ವೈದ್ಯರ ಶ್ರಮ ಸಾರ್ಥಕವಾದರೆ ದೇಶದಲ್ಲಿ ಮತ್ತೆ ಸುವರ್ಣಯುಗ ಆರಂಭವಾಗಲಿದೆ" ಎಂದು ಪದ್ಮ ಹಾಗೂ ಡಾ ಬಿ.ಸಿ. ರಾಯ್ ಪ್ರಶಸ್ತಿ ವಿಜೇತ ಡಾ. ರಘುರಾಮ್ ಪಿಳ್ಳಾರಿಶೆಟ್ಟಿ ಅಭಿಪ್ರಾಯ ಪಟ್ಟಿದ್ದಾರೆ.



ತುಮಕೂರಿನ ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಏಪ್ರಿಲ್ 12 ರಂದು ನಡೆದ 6 ನೇ ವರ್ಷದ ಪದವಿ ಪ್ರಧಾನ ಸಮಾರಂಭದಲ್ಲಿ ಮುಖ್ಯ ಭಾಷಣ ಮಾಡಿದರು. "ವಿಶೇಷವಾಗಿ ಗ್ರಾಮೀಣ ಜನರ ಜೀವನಮಟ್ಟ ಸುಧಾರಣೆಯಾದರೆ ಭಾರತ ಸುವರ್ಣಯುಗಕ್ಕೆ ಕಾಲಿಡಲಿದೆ. ಹಳ್ಳಿಗಾಡಿನಲ್ಲಿ ವೈದ್ಯರ ಕೊರತೆಯಿಂದಾಗಿ ಎಲ್ಲರಿಗೂ ಉತ್ತಮ ವೈದ್ಯಕೀಯಸೇವೆ ದೊರಕುತ್ತಿಲ್ಲ. ಈ ಪರಿಸ್ಥಿತಿ ಸಂಪೂರ್ಣ ಬದಲಾಗಬೇಕು. .ಭಾರತ ಬಡದೇಶ. ಆರು ಲಕ್ಷ ಹಳ್ಳಿಗಳಿವೆ. ಪ್ರತಿಯೊಬ್ಬರು ಅದರಲ್ಲೂ ವಿಶೇಷವಾಗಿ ವೈದ್ಯರು ಒಂದೊಂದು ಹಳ್ಳಿಯನ್ನು ದತ್ತು ತೆಗೆದುಕೊಂಡು ಜನರ ಆರೋಗ್ಯ ಸ್ಥಿತಿ ಸುಧಾರಿಸಿದರೆ ಅಮೃತಕಾಲ ಬದಲಾಗಿ ಮುಂದಿನ 25ವರ್ಷ ಸುವರ್ಣಯುಗವಾಗಲಿದೆ.

"ವೈದ್ಯರು ಅತಿ ಮುಖ್ಯವಾಗಿ ನಂಬಿಕೆ ಉಳಿಸಿಕೊಳ್ಳಬೇಕು. ಜೀವ ಕಾಪಾಡುವ ವಿಚಾರದಲ್ಲಿ ವೈದ್ಯಕೀಯ ಧರ್ಮ ಪಾಲಿಸಬೇಕು. ರೋಗಿಗಳು ಹೇಗಾದರೂ ಮಾಡಿ ವೈದ್ಯರು ನಮ್ಮನ್ನು ಕಾಪಾಡುತ್ತಾರೆ, ಪ್ರಾಣ ಉಳಿಸುತ್ತಾರೆ ಎಂಬ ಅಚಲ ನಂಬಿಕೆಯಿಂದಲೇ ಬರುತ್ತಾರೆ. ಆದ್ದರಿಂದ ಆ ನಂಬಿಕೆಯನ್ನು ಯಾವುದೇ ಕಾರಣಕ್ಕೂ ವೈದ್ಯಕೀಯ ಸಮುದಾಯ ಕಳೆದುಕೊಳ್ಳಬಾರದು. ದೇವರನ್ನು ಬಿಟ್ಟರೆ ಜನರು ಕೈ ಮುಗಿಯುವ, ಪ್ರತ್ಯಕ್ಷ, ಕಣ್ಣಿಗೆ ಕಾಣುವ ಮತ್ತೊಬ್ಬ ದೇವರು ಎಂದರೆ ವೈದ್ಯರು ಎಂಬುದನ್ನು ಪದವಿ ಮುಗಿಸಿ ವೃತ್ತಿಗೆ ಕಾಲಿಡುತ್ತಿರುವ ವೈದ್ಯರು ಚೆನ್ನಾಗಿ ಮನಗಾಣಬೇಕು.

"ಭಾರತೀಯ ಸಮಾಜದಲ್ಲಿ ಬೇರೆ ಯಾವುದೇ ಹುದ್ದೆ, ಪದವಿಯಲ್ಲಿ ಇಂತಹ ವಿಶೇಷ ಗೌರವ ದೊರೆಯುವುದಿಲ್ಲ ಯಾವುದೇ ಕಾರಣಕ್ಕೂ ಹಣದ ಆಮಿಷಕ್ಕೆ ಒಳಗಾಗಬಾರದು. ವಿಶೇಷವಾಗಿ ಸಂವಹನ ಕಲೆ ಸಿದ್ಧಿಸಿಕೊಳ್ಳಬೇಕು. ನನ್ನ ಅನುಭವದ ಪ್ರಕಾರ ಹಣ ಮಾಡುವುದಾಗಲಿ, ಹೆಸರು ಗಳಿಸುವುದಾಗಲಿ ಅದೇ ಅಂತಿಮವಲ್ಲ ಹಾಗೂ ಅದೇ ವೈದ್ಯರ ಯಶಸ್ಸಲ್ಲ. ನೀವು ಉತ್ತಮ ವೈದ್ಯರಾಗಬೇಕಾದರೆ ಮೊದಲು ರೋಗಿಯ ಮನಸ್ಥಿತಿ ಅರ್ಥ ಮಾಡಿಕೊಂಡು ಆಪ್ತಸಮಾಲೋಚನೆಯ ಮೂಲಕವೇ ಅವನ ಸಂಕಷ್ಟ ಬಗೆಹರಿಸಿ ಆತ್ಮವಿಶ್ವಾಸ ವೃದ್ಧಿಸುವುದೆ ನಿಜವಾದ ವೈದ್ಯನ ಗುಟ್ಟು. ಅಂದರೆ ವೈದ್ಯರು ಕೊಡುವ ಮಾತ್ರೆ, ಇಂಜಕ್ಷನ್ ಅಥವಾ ಮಾಡುವ ಆಪರೇಷನ್‌ಗಳಿಗಿಂತ ರೋಗಿಗಳೊಂದಿಗೆ ನಡೆಸುವ ಆಪ್ತಸಮಾಲೋಚನೆಯೇ ಮುಖ್ಯವಾಗಿ ಅದರ ಮೂಲಕವೇ ರೋಗಿಗಳ ಸಂಕಷ್ಟ, ತೊಂದರೆ ನಿವಾರಿಸಬೇಕು. ಆಗ ವೃತ್ತಿಯಲ್ಲಿ ಬಹಳ ಯಶಸ್ಸು ಕಾಣುತ್ತೀರಿ. ಅದು ನಿಜವಾದ ವೈದ್ಯನಿಗೆ ಇರಬೇಕಾದ ಅರ್ಹತೆ. ಪ್ರತಿಯೊಬ್ಬ ರೋಗಿಯೂ ಬಯಸುವುದು ಅದನ್ನೆ" ಎಂದು ಒತ್ತಿ ಹೇಳಿದರು.

ದೇಶದ ಉಪರಾಷ್ಟ್ರಪತಿಯಾಗಿದ್ದ ವೆಂಕಯ್ಯನಾಯ್ಡು ಅವರು ಸಾರ್ವಜನಿಕ ವೇದಿಕೆಗಳಲ್ಲಿ ಭಾರತೀಯ ಯುವಕರಿಗೆ ಹೇಳುತ್ತಿದ್ದ ಮಾತುಗಳನ್ನು ಪಿಳ್ಳಾರಿಶೆಟ್ಟಿ ಅವರು ಈ ಸಂದರ್ಭದಲ್ಲಿ ಮೆಲುಕು ಹಾಕಿದರು.

"ತಾಯಿನೆಲ. ತಾಯಿನುಡಿಗಳನ್ನು ಪ್ರೀತಿಸಿ, ಗೌರವಿಸಿ. ಅದೇ ರೀತಿ ನಿಮಗೆ ಜನ್ಮವನ್ನು ಕೊಟ್ಟ ತಂದೆ–ತಾಯಿಗಳನ್ನು ಪೂಜ್ಯ ಭಾವನೆಯಿಂದ ಗೌರವಿಸಿದರೆ, ಮನೆಯಲ್ಲಿಯೇ ಸಂತೋಷ, ನೆಮ್ಮದಿ ಉಕ್ಕಿ ಹರಿಯಲಿದೆ. ಇದನ್ನು ಹುಡುಕಿಕೊಂಡು ದೇವಸ್ಥಾನ, ಬೇರೆ ಸ್ಥಳಗಳಲ್ಲಿ ಹುಡುಕುವ ಪ್ರಮೆಯವೇ ಬರುವುದಿಲ್ಲ" ಎಂದು ಅವರು ಹೇಳಿದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ. ಎಂ.ಆರ್. ಹುಲಿನಾಯ್ಕರ್ ಮಾತನಾಡಿ, 'ಪದವಿ ಮುಗಿಯಿತು ಎಂದ ತಕ್ಷಣವೇ ಎಲ್ಲವೂ ಮುಗಿದು ಹೋಯಿತು ಎಂಬ ಭಾವನೆ ಸಲ್ಲದು. ಯಾವುದೇ ಕ್ಷೇತ್ರವಾದರೂ ನಿರಂತರ ಕಲಿಕೆ, ನಿರಂತರ ಅಧ್ಯಯನ, ಕಠಿಣ ಪರಿಶ್ರಮ ಮುಖ್ಯ. ಕಲಿಕೆ ಬದುಕಿನ ಅಂಗವಾಗಬೇಕು' ಎಂದರು.

■ ಕೆ.ಎಸ್. ರಾಜಮನ್ನಾರ್

# ನರ್ಸಿಂಗ್ ಬೋಧಕವರ್ಗದವರಿಗೆ ತರಬೇತಿ



■ **ಪ್ರೊ.ಎಸ್. ಉಷಾ**
**ಪ್ರಾಂಶುಪಾಲರು, ರಮಣ ಮಹರ್ಷಿ ನರ್ಸಿಂಗ್ ಕಾಲೇಜು**

ಆರೋಗ್ಯಕ್ಷೇತ್ರವು ಸತತವಾಗಿ ಬದಲಾಗುತ್ತಿರುವ ಈ ಯುಗದಲ್ಲಿ ನರ್ಸಗಳ ಮತ್ತು ನರ್ಸಿಂಗ್ ಬೋಧಕವರ್ಗದವರ ಪಾತ್ರವು ದಿನದಿಂದ ದಿನಕ್ಕೆ ಅತ್ಯಂತ ಮಹತ್ವವನ್ನು ಪಡೆಯುತ್ತಿದೆ. ನರ್ಸಿಂಗ್ ವಿದಾ-್ಯರ್ಥಿಗಳಲ್ಲಿ ರೋಗಿಗಳ ಆರೈಕೆಯ ಬಗೆಗೆ ನಿಷ್ಠೆ, ಮತ್ತು ವೃತ್ತಿಯ ಮೇಲಿನ ಪ್ರೀತಿಯನ್ನು ಬೆಳೆಸಲು ಅವರಿಗೆ ಸೂಕ್ತಜ್ಞಾನವನ್ನು ನೀಡುವುದು ಅತ್ಯಗತ್ಯವಾಗಿದೆ. ಈ ದೃಷ್ಟಿಯಿಂದ ಭಾರತೀಯ ನರ್ಸಿಂಗ್ ಮಂಡಳಿಯು (Indian Nursing Council - INC) ರಾಷ್ಟ್ರಮಟ್ಟದಲ್ಲಿ ನರ್ಸಿಂಗ್ ಕಾಲೇಜುಗಳ ಉಪನ್ಯಾಸಕರುಗಳಿಗೆ ಸಮಗ್ರ ತರಬೇತಿ ಕಾರ್ಯಕ್ರಮವೊಂದನ್ನು 2025ರ ಫೆಬ್ರವರಿ 18ರಿಂದ 22 ರವರೆಗೆ ಹರಿಯಾಣ ರಾಜ್ಯದ ಗುರುಗ್ರಾಮ್‌ನ SGT ಯೂನಿವರ್ಸಿಟಿಯ ರಾಷ್ಟ್ರೀಯ ರೆಫರೆನ್ಸ್ ಕೇಂದ್ರದಲ್ಲಿ ಆಯೋಜಿಸಿತ್ತು. ಬೋಧಕವರ್ಗದವರ ಜ್ಞಾನವನ್ನು ವಿಸ್ತಾರಗೊಳಿಸುವುದು, ಕೌಶಲಗಳನ್ನು ಅಭಿವೃದ್ಧಿಪಡಿಸುವುದು, ಅವರ ಚಿಂತನಶೀಲತೆಗೆ ಉತ್ತೇಜನ ನೀಡುವುದು ಮತ್ತು ತರಗತಿಯ ಬೋಧನೆ ಹಾಗೂ ಆಸ್ಪತ್ರೆಗಳಲ್ಲಿ ಅದರ ಸೂಕ್ತ ಅನ್ವಯ ಮಾಡುವುದರ ನಡುವೆ ಸಂಪರ್ಕವನ್ನು ಕಲ್ಪಿಸುವುದು ತನ್ಮೂಲಕ ಅವರನ್ನು ಸಬಲಗೊಳಿಸುವುದು ಈ ತರಬೇತಿಯ ಮುಖ್ಯ ಉದ್ದೇಶವಾಗಿತ್ತು.

ದೇಶದ ವಿವಿಧ ಭಾಗಗಳ ನರ್ಸಿಂಗ್ ಕಾಲೇಜುಗಳ ಉಪನ್ಯಾಸಕರು ಈ ತರಬೇತಿಯಲ್ಲಿ ಭಾಗವಹಿಸಿದ್ದರು. ವಿವಿಧ ಪರಿಣತಿಗಳಿಂದ ಹಾಗೂ ದೇಶದ ವಿವಿಧ ಭಾಗಗಳಿಂದ ಒಟ್ಟು 26 ಮಂದಿ ಪಾಲ್ಗೊಂಡಿದ್ದರು. ಶ್ರೀದೇವಿ ಮತ್ತು ಶ್ರೀರಮಣ ಮಹರ್ಷಿ ನರ್ಸಿಂಗ್ ಕಾಲೇಜುಗಳಿಂದ ಪ್ರಾಚಾರ್ಯರಾದ ಪ್ರೊ. ಉಷಾ, ಉಪನ್ಯಾಸಕರುಗಳಾದ ಶಿಲ್ಪಾ, ಚೇತನ್ ಹಾಗೂ ಲಕ್ಷ್ಮಿಅವರನ್ನು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಲಿಯು ಪ್ರಾಯೋಜಿಸಿತ್ತು.

ಕಾರ್ಯಕ್ರಮವು ಬಹು ಆಯಾಮದ ದೃಷ್ಟಿಕೋನವನ್ನು ಹೊಂದಿತ್ತು. ಪ್ರಥಮ ಹಂತದಲ್ಲಿ, ಭಾಗವಹಿಸಿದ್ದವರ ಜ್ಞಾನವನ್ನು ಉತ್ತಮಪಡಿಸುವುದಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿತ್ತು. ಅವರಿಂದ ನವೀನ ಸಾಕ್ಷ್ಯಾಧಾರಿತ ಚಟುವಟಿಕೆಗಳನ್ನು ಮಾಡಿಸಲಾಯಿತು ಮತ್ತು ಆರೋಗ್ಯಕ್ಷೇತ್ರದಲ್ಲಿ ಚಾಲ್ತಿಗೆ ಬರುತ್ತಿರುವ ಹೊಸ ಹೊಸ ಪ್ರವೃತ್ತಿಗಳ ಬಗೆಗೆ ಮತ್ತು ನರ್ಸಿಂಗ್ ವಿಜ್ಞಾನದಲ್ಲಿ ಆಗಿರುವ ಇತ್ತೀಚಿನ ಪ್ರಗತಿಯ ಬಗೆಗೆ ಅವರಿಗೆ ಮಾಹಿತಿ ನೀಡಲಾಯಿತು. ಪರಿಣತ ಅಧ್ಯಾಪಕರು ಸಂವಾದಾತ್ಮಕ ಉಪನ್ಯಾಸಗಳು ಮತ್ತು ಪ್ರಕರಣಾಧಾರಿತ ಚರ್ಚೆಗಳನ್ನು ನಡೆಸಿದರು.

ಅನಂತರದ ಹಂತದಲ್ಲಿ, ಪ್ರಮುಖ ತಾಂತ್ರಿಕ ಕೌಶಲಗಳ ತರಬೇತಿಯಿತ್ತು. ಉಪನ್ಯಾಸಗಳು ಮತ್ತು ಚರ್ಚೆಗಳ ಮೂಲಕ ಮೂಲಭೂತ ಹಾಗೂ ಉನ್ನತ ಮಟ್ಟದ ಕ್ಲಿನಿಕಲ್ ತಂತ್ರಗಳನ್ನು ಇನ್ನಷ್ಟು ಸರಳವಾಗಿ ಮತ್ತು ಪರಿಣಾಮಕಾರಿಯಾಗಿ ಅನುಸರಿಸುವ ತರಬೇತಿಯನ್ನು ನೀಡಲಾಯಿತು.

ಈ ತರಬೇತಿಯ ಮುಖ್ಯ ಉದ್ದೇಶಗಳೆಂದರೆ ಅವರಲ್ಲಿ ಚಿಂತನಶೀಲತೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವುದು. ಸಂಪನ್ಮೂಲ ವ್ಯಕ್ತಿಗಳು ನೈಜಪ್ರಕರಣಗಳ




ಆಧಾರದ ಮೇಲೆ ವಿಶ್ಲೇಷಣಾತ್ಮಕ ಕೌಶಲಗಳನ್ನು ಬೆಳೆಸುವ ವಿಧಾನಕ್ಕೆ ಮಹತ್ವವನ್ನು ನೀಡಿದರು. ಭಾಗವಹಿಸಿದ್ದದವರು ಕ್ರಮಬದ್ಧವಾದ ವಿಶ್ಲೇಷಣೆ, ತಮ್ಮ ವಿವಿಧ ಸೇವೆಗಳಿಗೆ ನೀಡಬೇಕಾದ ಆದ್ಯತೆ, ಮತ್ತು ಗಮನದಲ್ಲಿಡಬೇಕಾದ ನೈತಿಕ ಅಂಶಗಳು, ಪ್ರಾಯೋಗಿಕ ರೀತಿನೀತಿ ಇವುಗಳನ್ನು ಮನದಟ್ಟು ಮಾಡಿಕೊಂಡರು.

ಈ ಕೌಶಲಗಳನ್ನು ಇನ್ನಷ್ಟು ಗಟ್ಟಿ ಮಾಡಬೇಕೆಂಬ ಉದ್ದೇಶದಿಂದ ಸಿಮ್ಯುಲೇಷನ್‌ಗಳನ್ನು (simulation) ಆಧರಿಸಿದ ಅಧ್ಯಯನಕ್ಕೆ ಪ್ರಾಮುಖ್ಯವನ್ನು ನೀಡಲಾಗಿತ್ತು. ಹೈ-ಫಿಡೆಲಿಟಿ ಮ್ಯಾನೆಕಿನ್‌ಗಳು ಹಾಗೂ ವರ್ಚುವಲ್ ರಿಯಾಲಿಟಿ ಸಾಧನಗಳನ್ನು ಭಾಗವಹಿಸಿದ್ದವರಿಗೆ ಒದಗಿಸಲಾಗಿತ್ತು. ಇದರಿಂದ ಅವರು ತಮ್ಮ ಸೇವೆಯಲ್ಲಿ ಆನ್ವಯಿಕ ಜ್ಞಾನವನ್ನು ಬಳಸಿಕೊಂಡು ಕರ್ತವ್ಯಗಳನ್ನು ನಿರ್ವಹಿಸುವ ವಿಧಾನವನ್ನು ಕಲಿತರು ಹಾಗೂ ತಮ್ಮ ಸಂವಹನ ಕೌಶಲಗಳನ್ನು ಸುಧಾರಿಸಿಕೊಂಡರು. ಬೋಧಕವರ್ಗದವರು ತರಗತಿಯಲ್ಲಿ ತಮ್ಮ ವಿದ್ಯಾರ್ಥಿಗಳಿಗೆ ಪರಿಣಾಮಕಾರಿ ಬೋಧನಾ ವಿಧಾನಗಳನ್ನು ಅನುಸರಿಸಿ ಅವರಿಗೆ ಹೆಚ್ಚಿನ ಜ್ಞಾನವನ್ನು ಬೋಧಿಸಲು ಈ ಸಿಮ್ಯುಲೇಷನ್‌ಗಳು ಸಹಾಯ ಮಾಡಿದವು.

ಸಿಮ್ಯುಲೇಷನ್ನಿನ ಜೊತೆಗೆ ನಿಜ ಜೀವನದಅನುಭವದ ಮೂಲಕ ನೀಡಬಹುದಾದ ತರಬೇತಿಗೂ ಹೆಚ್ಚಿನ ಒತ್ತು ನೀಡಲಾಯಿತು. ಭಾಗವಹಿಸಿದವರಿಗೆ ಅವರ ವಿದ್ಯಾರ್ಥಿಗಳು ತರಗತಿಯಲ್ಲಿ ಪಡೆದ ತಿಳಿವಳಿಕೆಯನ್ನು ಹಾಗೂ ಅವರ ಸೇವೆಯ ಸಮಯದಲ್ಲಿ ಅನುಸರಿಸಬೇಕಾದ ರೀತಿ ನೀತಿ ಮತ್ತು ವಿಧಿವಿಧಾನಗಳನ್ನು ಸಮರ್ಪಕವಾಗಿ ತಿಳಿಸಿಕೊಡಲು ಅಗತ್ಯವಾದ ತರಬೇತಿಯನ್ನು ನೀಡಲಾಯಿತು.

ಈ ತರಬೇತಿಯಲ್ಲಿ ಭಾಗವಹಿಸಿದವರ ಅಭಿಪ್ರಾಯಗಳು ಹೀಗಿದ್ದವು: ಇಂತಹ ಕಾರ್ಯಕ್ರಮಗಳು ಆರೋಗ್ಯಕ್ಷೇತ್ರದಲ್ಲಿ ಶುಷ್ರೂಷಾ ಸೇವೆಯನ್ನು ಸಲ್ಲಿಸುವವರಿಗೆ ಅತ್ಯಗತ್ಯವಾಗಿರುತ್ತವೆ, ತರಗತಿಯ ಜ್ಞಾನ ಮತ್ತು ನೈಜ ಅನುಭವಗಳ ನಡುವೆ ಇರುವ ಕಂದಕವನ್ನು ಕಡಮೆಮಾಡುತ್ತವೆ. ಇವುಗಳ ಕಾರ್ಯಕ್ರಮಗಳ ಮೂಲಕ ಪ್ರಸ್ತುತ ಇರುವ ಆರೋಗ್ಯ ಸೇವಾವ್ಯವಸ್ಥೆಯನ್ನು ಇನ್ನಷ್ಟು ಉತ್ತಮಗೊಳಿಸಲು ಸಾಧ್ಯವಾಗುತ್ತದೆ. ಜ್ಞಾನ, ಕೌಶಲ್ಯ, ಚಿಂತನಶೀಲತೆ ಮತ್ತು ಅನುಭವಗಳ ಸಮ್ಮಿಲನದಿಂದ ಈ ತರಬೇತಿಯು ಹೊಸ ಸವಾಲುಗಳನ್ನು ಆತ್ಮಸ್ಥೈರ್ಯದಿಂದ ಎದುರಿಸಲು ನರ್ಸ್‌ಗಳನ್ನು ಸಿದ್ಧಗೊಳಿಸಲು ಬಹಳ ಸಹಾಯ ಮಾಡುತ್ತದೆ.

## ಮಹಿಳಾ ಸಬಲೀಕರಣಕ್ಕೆ ಮಹತ್ತ್ವದ ಕೊಡುಗೆ

# ಗರ್ಭಕಂಠ ಕ್ಯಾನ್ಸರ್ ತಡೆಗೆ ಹೆಚ್‌ಪಿವಿ ಲಸಿಕಾ ಅಭಿಯಾನ

ಮಹಿಳೆ ಕುಟುಂಬದ ಕಣ್ಣು. ಆ ಮೂಲಕ, ಆಕೆ ದೇಶದ ಅತ್ಯಮೂಲ್ಯ ಸಂಪತ್ತೂ ಹೌದು. ಸಮುದಾಯದಲ್ಲಿ ಸ್ತ್ರೀಯರ ಆರೋಗ್ಯ ಉತ್ತಮವಾಗಿದ್ದಾಗ ಮಾತ್ರ ಸದೃಢ ಪೀಳಿಗೆಯ ಮತ್ತು ದೇಶದ ಸರ್ವಾಂಗೀಣ ಅಭಿವೃದ್ಧಿಯ ಕನಸು ಸಾಕಾರಗೊಳ್ಳಲು ಸಾಧ್ಯ. ಈ ಧ್ಯೇಯದೊಂದಿಗೆ ಮಹತ್ವದ ಉಪಕ್ರಮವನ್ನು ರೂಪಿಸಿ, ಅದನ್ನು ಅನುಷ್ಠಾನಗೊಳಿಸುವಲ್ಲಿ ತೊಡಗಿಕೊಂಡು ಮಹಿಳೆಯರ ಆರೋಗ್ಯಕ್ಕಾಗಿ ನಿಷ್ಠೆಯಿಂದ ಸೇವೆಯನ್ನು ಮಾಡುತ್ತಿರುವವರು ಬೆಂಗಳೂರಿನ ಡಾ. ಹೇಮಾ ದಿವಾಕರ್.

ಹೆಚ್‌ಡಿಆರ್ ಹೆಲ್ತ್‌ಕೇರ್ ಫೌಂಡೇಷನ್ ಸಂಸ್ಥಾಪಕಿ ಹಾಗೂ ಅಂತಾರಾಷ್ಟ್ರೀಯ ಪ್ರಸೂತಿ ಮತ್ತು ಸ್ತ್ರೀರೋಗತಜ್ಞರ ಒಕ್ಕೂಟದ (International Federation of Gynecology and Obstetrics- FIGO) ವೆಲ್‌ವಿಮೆನ್ ವಿಭಾಗದ ನಿರ್ದೇಶಕಿಯೂ ಆಗಿರುವ ಡಾ. ಹೇಮಾ ದಿವಾಕರ್ ಅವರು ಗರ್ಭಕಂಠ ಕ್ಯಾನ್ಸರ್-ಮುಕ್ತ ಭವಿಷ್ಯವನ್ನು ನಿರ್ಮಿಸುವ ಧ್ಯೇಯದೊಂದಿಗೆ ಕಳೆದ ನಾಲ್ಕು ತಿಂಗಳಿಂದ ರಾಜ್ಯದ ವಿವಿಧೆಡೆ ಹೆಣ್ಣು ಮಕ್ಕಳಿಗೆ ಉಚಿತ ಹೆಚ್.ಪಿ.ವಿ. (ಹ್ಯೂಮನ್ ಪ್ಯಾಪಿಲೋಮ ವೈರಾಣು) ಲಸಿಕಾ ಅಭಿಯಾನ ನಡೆಸುತ್ತಿದ್ದಾರೆ. ಇದಕ್ಕಾಗಿ, ಎಚ್.ಡಿ.ಆರ್. ಫೌಂಡೇಶನ್ ಹಾಗೂ ಆರ್ಟಿಸ್ಟ್ (ARTIST) ಏಷಿಯನ್ ರಿಸರ್ಚ್ ಅಂಡ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಫಾರ್ ಸ್ಕಿಲ್ ಟ್ರಾನ್ಸ್‌ಫರ್) ಸಹಭಾಗಿತ್ವದ ಮೂಲಕ ಆರೋಗ್ಯಸೇವಾ ಸಂಸ್ಥೆಗಳು, ನೀತಿನಿರೂಪಕರು, ಸಮಾಜಸೇವಾಸಂಸ್ಥೆಗಳು ಹಾಗೂ ರಾಜ್ಯ ಪ್ರಸೂತಿ ಮತ್ತು ಸ್ತ್ರೀರೋಗ ವೈದ್ಯರ ಸಂಸ್ಥೆಯ ಸಹಕಾರದೊಂದಿಗೆ ಲಸಿಕಾ ಆಂದೋಲನ ಹಮ್ಮಿಕೊಳ್ಳುವ ಜೊತೆಗೆ ಜಾಗೃತಿ ಕಾರ್ಯಕ್ರಮಗಳನ್ನೂ ನಡೆಸುತ್ತಿದ್ದಾರೆ.

ಈವರೆಗೆ ಹಾಸನ, ಅದೇ ಜಿಲ್ಲೆಯ ಮಲ್ಲೂರು, ಆಲೂರು, ಅರಕಲಗೂಡು ತಾಲ್ಲೂಕಿನ ಅರಸೀಕಟ್ಟೆ, ಮಡಿಕೇರಿ, ಕುಶಾಲನಗರ, ಭಾಲ್ಕಿ, ಕಲಬುರಗಿ, ಮೈಸೂರು, ಮೂಡಬಿದರೆ ಮತ್ತಿತರ ಕಡೆಗಳಲ್ಲಿ ಯಶಸ್ವಿಯಾಗಿ ಹೆಚ್‌ಪಿವಿ ಲಸಿಕಾ ಅಭಿಯಾನಗಳನ್ನು ಆಯೋಜಿಸಿದ್ದಾರೆ. ಈ ಶಿಬಿರಗಳಲ್ಲಿ ಸುಮಾರು 9ರಿಂದ 14 ವರ್ಷದೊಳಗಿನ ಸುಮಾರು 4,560 ಹೆಣ್ಣು ಮಕ್ಕಳಿಗೆ ತಲಾ ಸುಮಾರು 2,000 ರೂಪಾಯಿಯ ಲಸಿಕೆಯನ್ನು ಉಚಿತವಾಗಿ ಹಾಕಿದ್ದಾರೆ. ಜೊತೆಗೆ, 'ತಾಯಂದಿರನ್ನು ತಪಾಸಣೆಗೆ ಒಳಪಡಿಸಿ, ಹೆಣ್ಣು ಮಕ್ಕಳಿಗೆ ಲಸಿಕೆ ಹಾಕಿಸಿ', 'ಕ್ಯಾನ್ಸರ್ ನಿಮ್ಮನ್ನು ಕೊಲ್ಲುವ ಮುನ್ನ, ನೀವು ಅದನ್ನು ಕೊಲ್ಲಿ' ಮತ್ತಿತರ ಘೋಷವಾಕ್ಯಗಳ ಮೂಲಕ ಮಹಿಳೆಯರ ಆರೋಗ್ಯ ಹಾಗೂ ಸ್ವಾಸ್ಥ್ಯ ಸಂರಕ್ಷಣೆಯ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವ ಮಹತ್ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಇದೇ ವೇಳೆ, 1,500ಕ್ಕೂ ಹೆಚ್ಚು ಮಹಿಳೆಯರನ್ನು ಸ್ಕ್ರೀನಿಂಗ್‌ಗೆ ಒಳಪಡಿಸಿರುವುದು ಗಮನಾರ್ಹ.

ಮಹಿಳೆಯರನ್ನು ಪ್ರಮುಖವಾಗಿ ಕಾಡುವ ಕ್ಯಾನ್ಸರ್‌ಗಳ ಪೈಕಿ, ಸ್ತನ ಕ್ಯಾನ್ಸರ್ ನಂತರದ ಎರಡನೇ ಸ್ಥಾನದಲ್ಲಿರುವುದು ಗರ್ಭಕಂಠದ ಕ್ಯಾನ್ಸರ್ ಆಗಿದೆ. ಆದರೆ, ಸಮಾಧಾನದ ಸಂಗತಿಯೆಂದರೆ, ಕ್ಯಾನ್ಸರ್‌ಗಳ ಪೈಕಿ ಗರ್ಭಕಂಠದ ಕ್ಯಾನ್ಸರ್ ಮಾತ್ರವೇ ಲಸಿಕಾ ರಕ್ಷಣೆಯಿರುವ ಕ್ಯಾನ್ಸರ್ ಆಗಿದೆ. ಹೀಗಾಗಿಯೇ, ರಾಜ್ಯಸಭೆಗೆ ನಾಮನಿರ್ದೇಶಿತರಾಗಿ ಸದಸ್ಯರಾಗಿ ನೇಮಕಗೊಂಡ ಇನ್ಫೋಸಿಸ್‌ನ ಡಾ. ಸುಧಾಮೂರ್ತಿ ಅವರು, ತಾವು ಸದನದಲ್ಲಿ ಮೊತ್ತಮೊದಲ ಬಾರಿಗೆ ಮಾತನಾಡಿದಾಗ, ಮಹಿಳೆಯರನ್ನು ಗರ್ಭಕಂಠ ಕ್ಯಾನ್ಸರ್‌ನಿಂದ ಮುಕ್ತಗೊಳಿಸಲು ದೇಶದಾದ್ಯಂತ ಹೆಚ್‌ಪಿವಿ ಲಸಿಕಾ ಆಂದೋಲನ ಹಮ್ಮಿಕೊಳ್ಳಬೇಕಾದ ಅಗತ್ಯದ ಬಗ್ಗೆ ಗಮನ ಸೆಳೆದಿದ್ದರು.




**ಗರ್ಭಕಂಠ ಕ್ಯಾನ್ಸರ್‌ನಿಂದಾಗಿ ದೇಶದಲ್ಲಿ ಪ್ರತಿ ಐದು ನಿಮಿಷಕ್ಕೆ ಒಬ್ಬ ಮಹಿಳೆಯ ಸಾವು ಸಂಭವಿಸುತ್ತಿದೆ. ಈ ಲಸಿಕೆ ಹಾಕಿಸಿಕೊಳ್ಳುವುದರಿಂದ ಮಹಿಳೆಯರು ಸರ್ವೈಕಲ್‌ಕ್ಯಾನ್ಸರ್ ಸಂಭಾವ್ಯತೆಯಿಂದ ಪಾರಾಗಬಹುದು. ಲಸಿಕಾ ಅಭಿಯಾನವನ್ನು ದೇಶದಾದ್ಯಂತ ವ್ಯಾಪಕಗೊಳಿಸಿದರೆ ಪೋಲಿಯೋದಂತೆಯೇ ಇದನ್ನು ಕೂಡ ಮುಂದಿನ 10-15 ವರ್ಷಗಳಲ್ಲಿ ಸಂಪೂರ್ಣ ನಿರ್ಮೂಲನೆಗೊಳಿಸಿ, ಗರ್ಭಕಂಠ ಕ್ಯಾನ್ಸರ್-ಮುಕ್ತ ಭವಿಷ್ಯವನ್ನು ನಿರ್ಮಿಸಬಹುದು.**

ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಹೆಚ್‌ಒ) ಪ್ರಕಾರ, ಶೇಕಡ 90ರಷ್ಟು ಗರ್ಭಕಂಠ ಕ್ಯಾನ್ಸರ್ ಸಾವಿನ ಪ್ರಕರಣಗಳು ಕಡಿಮೆ ಹಾಗೂ ಮಧ್ಯಮ ಆದಾಯದ ದೇಶಗಳಲ್ಲಿ ಸಂಭವಿಸುತ್ತವೆ. ಸ್ಕ್ರೀನಿಂಗ್, ಲಸಿಕೆ ಹಾಗೂ ಚಿಕಿತ್ಸಾವ್ಯವಸ್ಥೆಯ ಅಲಭ್ಯತೆಗಳೇ ಇದಕ್ಕೆ ಮುಖ್ಯಕಾರಣವಾಗಿದ್ದು, 90-70-90 ಸೂತ್ರ ಅನುಸರಿಸುವ ಮೂಲಕ ಇದಕ್ಕೆ ಪರಿಹಾರ ಕಂಡುಕೊಳ್ಳಬಹುದಾಗಿದೆ. 9ರಿಂದ 14 ವರ್ಷದೊಳಗಿನ ಶೇಕಡಾ 90ರಷ್ಟು ಹೆಣ್ಣು ಮಕ್ಕಳಿಗೆ ಹೆಚ್‌ಪಿವಿ ಲಸಿಕೆ ಹಾಕಿಸಬೇಕು; ಇಪ್ಪತ್ತೈದು ವರ್ಷ ಮೇಲ್ಪಟ್ಟ ಶೇಕಡಾ 70ರಷ್ಟು ಮಹಿಳೆಯರನ್ನು ಹೆಚ್‌ಪಿವಿ ಸ್ಕ್ರೀನಿಂಗ್‌ಗೆ ಒಳಪಡಿಸಬೇಕು ಹಾಗೂ ಪಾಸಿಟಿವ್ ಪ್ರಕರಣಗಳಲ್ಲಿ ಶೇಕಡಾ 90ರಷ್ಟು ಬಾಧಿತರಿಗೆ ಸಕಾಲಿಕ ಚಿಕಿತ್ಸೆ ಲಭ್ಯವಾಗಿಸಬೇಕು ಎಂಬುದೇ ಈ ಸೂತ್ರವಾಗಿದೆ.

ಡಾ. ಹೇಮಾ ದಿವಾಕರ್ ಅವರು ಹೇಳುವಂತೆ, ಪ್ಯಾಪ್ ಮತ್ತು ಹೆಚ್‌ಪಿವಿ ಪರೀಕ್ಷೆಗಳಿಂದ ವೈರಾಣುವಿನಿಂದಾಗಿ ಗರ್ಭಕಂಠದಲ್ಲಿ ಉಂಟಾಗುವ ಬದಲಾವಣೆಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಹಚ್ಚಬಹುದಾಗಿದೆ. ಇನ್ನು, 9ರಿಂದ 14 ವರ್ಷದ ಹೆಣ್ಣು ಮಕ್ಕಳಿಗೆ ಕನಿಷ್ಠ ಒಂದು ಬಾರಿ ಲಸಿಕೆ ಹಾಕಬೇಕು. ಆರು ತಿಂಗಳ ಅವಧಿಯ ನಂತರ ಎರಡನೇ ಬಾರಿ ಲಸಿಕೆ ಹಾಕಿಸಿದರೆ ಅದು ಅವರಿಗೆ ಗರಿಷ್ಠ ರಕ್ಷಣೆಯನ್ನು ನೀಡುತ್ತದೆ. 15 ವರ್ಷದ ನಂತರ ಲಸಿಕೆ ಹಾಕಿಸಿದರೆ, ಆರು ತಿಂಗಳ ಅವಧಿಯಲ್ಲಿ ಮೂರು ಡೋಸ್ ತೆಗೆದುಕೊಳ್ಳುವುದು ಸೂಕ್ತ.

"ಗರ್ಭಕಂಠ ಕ್ಯಾನ್ಸರ್‌ನಿಂದಾಗಿ ದೇಶದಲ್ಲಿ ಪ್ರತಿ ಐದು ನಿಮಿಷಕ್ಕೆ ಒಬ್ಬ ಮಹಿಳೆಯ ಸಾವು ಸಂಭವಿಸುತ್ತಿದೆ. ಈ ಲಸಿಕೆ ಹಾಕಿಸಿಕೊಳ್ಳುವುದರಿಂದ ಮಹಿಳೆಯರು ಸರ್ವೈಕಲ್‌ಕ್ಯಾನ್ಸರ್ ಸಂಭಾವ್ಯತೆಯಿಂದ ಪಾರಾಗಬಹುದು. ಲಸಿಕಾ ಅಭಿಯಾನವನ್ನು ದೇಶದಾದ್ಯಂತ ವ್ಯಾಪಕಗೊಳಿಸಿದರೆ ಪೋಲಿಯೋದಂತೆಯೇ ಇದನ್ನು ಕೂಡ ಮುಂದಿನ 10-15 ವರ್ಷಗಳಲ್ಲಿ ಸಂಪೂರ್ಣ ನಿರ್ಮೂಲನೆಗೊಳಿಸಿ, ಗರ್ಭಕಂಠ ಕ್ಯಾನ್ಸರ್-ಮುಕ್ತ ಭವಿಷ್ಯವನ್ನು ನಿರ್ಮಿಸಬಹುದು" ಎನ್ನುತ್ತಾರೆ ಡಾ.ಹೇಮಾ.

ಹೆಚ್‌ಪಿವಿ ಲಸಿಕೆ ಹಾಕಿಸಿಕೊಂಡರೆ ಸಂತಾನೋತ್ಪತ್ತಿ ಶಕ್ತಿ ಕುಂದುತ್ತದೆ, ಈ ಕ್ಯಾನ್ಸರ್, ವಯಸ್ಸಾದ ಮಹಿಳೆಯರಿಗೆ ಬರುತ್ತದೆ ಎಂಬ ಮಿಥ್ಯಗಳೂ ಸಮುದಾಯದಲ್ಲಿವೆ. ಆದರೆ, ವಾಸ್ತವವೆಂದರೆ, ಈ ಲಸಿಕೆಯು ಸಂಪೂರ್ಣ ಸುರಕ್ಷಿತ ಎಂಬುದು ಹಲವಾರು ಪರೀಕ್ಷೆಗಳಿಂದ ದೃಢಪಟ್ಟಿದ್ದು, ಇದರಿಂದ ಸಂತಾನೋತ್ಪತ್ತಿ ಶಕ್ತಿಯ ಮೇಲೆ ಯಾವ ರೀತಿಯ ಅಡ್ಡ ಪರಿಣಾಮವೂ ಆಗುವುದಿಲ್ಲ; ಅಲ್ಲದೆ, ಇದು ಪ್ರಾಯದ ಮಹಿಳೆಯರಲ್ಲೂ ತಲೆದೋರುವ ಅಪಾಯವಿರುತ್ತದೆ ಎಂಬುದರ ಬಗೆಗೆ ಜಾಗೃತಿಯನ್ನು ಮೂಡಿಸುವುದಕ್ಕೂ ಹೇಮಾ ಅವರು ಒತ್ತು ನೀಡುತ್ತಿದ್ದಾರೆ.

30 ವರ್ಷ ಮೇಲ್ಪಟ್ಟ ಪ್ರತಿ ಮಹಿಳೆಯೂ 3 ಅಥವಾ 5 ವರ್ಷಕ್ಕೊಮ್ಮೆ ಕ್ಯಾನ್ಸರ್ ಸ್ಕ್ರೀನಿಂಗ್‌ಟೆಸ್ಟ್ ಮಾಡಿಸಿಕೊಳ್ಳುವುದು ಅತ್ಯವಶ್ಯ. ಆದರೆ ನಮ್ಮ ದೇಶದಲ್ಲಿ ಶೇಕಡಾ ಒಂದರಷ್ಟು ಮಹಿಳೆಯರೂ ಈ ತಪಾಸಣೆ ಮಾಡಿಸಿಕೊಳ್ಳದಿರುವುದು ಕಳವಳಕಾರಿ ಸಂಗತಿಯಾಗಿದೆ. ಇನ್ನು, ಕರ್ನಾಟಕದಲ್ಲಿ ಈ ಸ್ಕ್ರೀನಿಂಗ್ ಟೆಸ್ಟ್‌ಗೆ ಒಳಪಡುವವರ ಪ್ರಮಾಣ ಕೇವಲ ಶೇಕಡಾ 0.2ರಷ್ಟಿದೆ. ಆದರೆ, ಮುಂದುವರಿದ ವಿದೇಶಗಳಲ್ಲಿ ಈ ಪ್ರಮಾಣ ಶೇಕಡಾ 90ರಷ್ಟಿದೆ. ನಮ್ಮಲ್ಲಿ ಪ್ರತಿವರ್ಷವೂ ಗರ್ಭಕಂಠದ ಕ್ಯಾನ್ಸರ್‌ನ ಐದು ಸಾವಿರ ಹೊಸ ಪ್ರಕರಣಗಳು ಕಂಡುಬರುತ್ತಿವೆ. ಮುಂಚೆ ಈ ಸಂಬಂಧ ಇಲ್ಲಿ ಸೂಕ್ತ ತಪಾಸಣಾ ಸೌಕರ್ಯ ಹಾಗೂ ಅಂಕಿಅಂಶಗಳ ಲಭ್ಯತೆ ಇರಲಿಲ್ಲ. ಆದರೆ ಈಗ ಪರಿಸ್ಥಿತಿ ಬದಲಾಗಿದೆ ಹಾಗಿದ್ದರೂ, ಕೊನೆಯ ಹಂತದಲ್ಲಿ ಈ ಕ್ಯಾನ್ಸರ್ ದೃಢಪಡುತ್ತಿರುವ ಪ್ರಕರಣಗಳ ಸಂಖ್ಯೆ ನಮ್ಮ ದೇಶದಲ್ಲಿ ವಾರ್ಷಿಕ 70,000ದಿಂದ 80,000ದಷ್ಟಿದ್ದು, ಇವೆಲ್ಲಾ ಸಾವಿನಲ್ಲಿ ಅಂತ್ಯಕಾಣುತ್ತಿವೆ. ಆದರೆ, ವಿದೇಶಗಳಲ್ಲಿ ಈ ಬಾಧೆಯಿಂದಾಗಿ ಸಾವಿಗೀಡಾಗುವ ಮಹಿಳೆಯರ ಪ್ರಮಾಣ ವರ್ಷಕ್ಕೆ ಸುಮಾರು 300 ಎನ್ನುವ ಬಗ್ಗೆ ಡಾ. ಹೇಮಾ ಗಮನ ಸೆಳೆಯುತ್ತಾರೆ.

"ಸಾಮುದಾಯಿಕ ಪ್ರಯತ್ನದಿಂದ ಗರ್ಭಕಂಠದ ಕ್ಯಾನ್ಸರ್ ನಿರ್ಮೂಲನೆಯ ಗುರಿ ಸಾಧಿಸಬಹುದು. ಅದಕ್ಕೆ ಬೇಕಾದ ಸಾಧನಗಳು ಹಾಗೂ ಜ್ಞಾನ ಇಂದು ನಮ್ಮಲ್ಲಿದೆ. 'ಫೆಮ್‌ಟೆಕ್' (ಫೀಮೇಲ್ ಟೆಕ್ನಾಲಜಿ) ನವೀನತೆಗಳು ಹಾಗೂ ದತ್ತಾಂಶ ನಿರ್ದೇಶಕ ವಿಧಾನಗಳು ಇದರಲ್ಲಿ ಮುಖ್ಯ ಪಾತ್ರ ವಹಿಸುತ್ತವೆ. ಇದಕ್ಕಾಗಿ, ಡಿಜಿಟಲ್ ಆರೋಗ್ಯ ಪರಿಹಾರಗಳು, ಆಪ್‌ಗಳ ಮೂಲಕ ಸ್ಕ್ರೀನಿಂಗ್ ಸಮಯವನ್ನು ನಿಗದಿಗೊಳಿಸುವಿಕೆ, ಡಿಜಿಟಲ್ ಪ್ರಚಾರದ ಮೂಲಕ ಅರಿವು ಮೂಡಿಸುವಿಕೆ, ಟೆಲಿಮೆಡಿಸನ್ ಸೇವೆಗಳ ಮೂಲಕ ಸಮಾಲೋಚನೆ ಇತ್ಯಾದಿ ಕ್ರಮಗಳನ್ನು ಅಳವಡಿಸಿಕೊಳ್ಳಬೇಕು" ಎಂದು ಹೇಮಾ ಅವರು ಅಭಿಪ್ರಾಯಪಡುತ್ತಾರೆ.

ಹೆಚ್‌ಪಿವಿ ಲಸಿಕಾ ಆಂದೋಲನವನ್ನು ರಾಷ್ಟ್ರೀಯ ಕಾರ್ಯಕ್ರಮವಾಗಿಸಲು ವಿವಿಧ ಹಂತಗಳಲ್ಲಿ ಚಿಂತನೆ ಹಾಗೂ ಪ್ರಯತ್ನಗಳು ನಡೆಯುತ್ತಿದ್ದರೂ ಅದಿನ್ನೂ ಫಲಪ್ರದವಾಗಿಲ್ಲ. ಆದರೆ, ಕರ್ನಾಟಕ ರಾಜ್ಯ ಸರ್ಕಾರದ ಮಟ್ಟಿಗೆ ಹೇಳುವುದಾದರೆ, ಕಲ್ಯಾಣ ಕರ್ನಾಟಕ ಭಾಗದ ಐದು ಜಿಲ್ಲೆಗಳ ವ್ಯಾಪ್ತಿಯ 20 ತಾಲ್ಲೂಕುಗಳಲ್ಲಿ 14 ವರ್ಷದ ಹೆಣ್ಣು ಮಕ್ಕಳಿಗೆ ಉಚಿತ ಹೆಚ್‌ಪಿವಿ ಲಸಿಕಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಕಟಿಸಿರುವುದು ಗಮನಾರ್ಹ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹೆಚ್‌ಪಿವಿ ಲಸಿಕಾ ಅಭಿಯಾನವನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸುವ ಪ್ರಸ್ತಾವವು ಸರ್ಕಾರದ ಮುಂದಿದ್ದು, ಈ ಬಗ್ಗೆ ಸದ್ಯದಲ್ಲೇ ನಿರ್ಧಾರ ತೆಗೆದುಕೊಳ್ಳುವುದಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ದಿನೇಶ್ ಗುಂಡೂರಾವ್ ಅವರು ಪ್ರಕಟಿಸಿರುವುದು ಕೂಡ ಸ್ವಾಗತಾರ್ಹ. ಇವುಗಳ ಜೊತೆಗೆ, ಸರ್ಕಾರದ 'ಗೃಹ ಆರೋಗ್ಯ' ಉಪಕ್ರಮದಡಿ ಮಹಿಳೆಯರನ್ನು ಆರೋಗ್ಯ ಉಪಕೇಂದ್ರಗಳಲ್ಲಿ ಸ್ತನ ಕ್ಯಾನ್ಸರ್, ಗರ್ಭಕಂಠ ಕ್ಯಾನ್ಸರ್, ಬಾಯಿ ಕ್ಯಾನ್ಸರ್ ಸೇರಿದಂತೆ ಸುಮಾರು 15 ಅನಾರೋಗ್ಯಗಳ ಪತ್ತೆಗಾಗಿ ಸ್ಕ್ರೀನಿಂಗ್‌ಗೆ ಒಳಪಡಿಸಲು ಸರ್ಕಾರ ಮುಂದಾಗಿರುವುದು ಮಹತ್ವದ ಹೆಜ್ಜೆಯಾಗುವ ನಿರೀಕ್ಷೆ ಮೂಡಿಸಿದೆ.

ಮುಂಬರುವ ದಿನಗಳಲ್ಲಿ, ರಾಜ್ಯದ ಎಲ್ಲಾ ಹದಿಹರೆಯದ ಹೆಣ್ಣು ಮಕ್ಕಳಿಗೂ ಹೆಚ್‌ಪಿವಿ ಲಸಿಕೆಯ ಪ್ರಯೋಜನ ಲಭ್ಯವಾಗಬೇಕು ಹಾಗೂ ಆರಂಭಿಕ ಹಂತದಲ್ಲೇ ರೋಗ ಪತ್ತೆಹಚ್ಚಲು ಅನುಕೂಲವಾಗುವಂತೆ ಸ್ಕ್ರೀನಿಂಗ್ ವ್ಯವಸ್ಥೆ ಸದೃಢವಾಗಬೇಕು ಎಂಬುದೇ ಆರೋಗ್ಯಪೂರ್ಣ ಸಮಾಜದ ಹಿತಚಿಂತಕರ ಆಶಯವಾಗಿದೆ. ಈ ಹಿನ್ನೆಲೆಯಲ್ಲಿ, ಮಹಿಳೆಯರ ಆರೋಗ್ಯ ಸಂರಕ್ಷಣೆ ಮೂಲಕ ಅವರ ಸಬಲೀಕರಣದ ದಿಸೆಯಲ್ಲಿ ಹೆಚ್‌ಪಿವಿ ಲಸಿಕಾ ಅಭಿಯಾನ ಹಾಗೂ ಸಾಮಾಜಿಕ ಜಾಗೃತಿಯಲ್ಲಿ ತೊಡಗಿಸಿಕೊಂಡಿರುವ ಡಾ. ಹೇಮಾ ದಿವಾಕರ್ ಅವರ ಸಕ್ರಿಯತೆ ಅನುಕರಣೀಯ.

**▪ ವರದಿ: ವೆಂಕಟೇಶ ಪ್ರಸಾದ್ ಬಿ.ಎಸ್.**

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**